9. ಹಣ ಪಾವತಿ ಸಂದರ್ಭದಲ್ಲಿ ಅನ್ವಯವಾಗುವ ದರದಲ್ಲಿ ಆದಾಯ ತೆರಿಗೆ/ಸೇವಾ ತೆರಿಗೆ ಮೊದಲಾದ ಬಾಬ್ತುಗಳನ್ನು ಕಡ್ಡಾಯವಾಗಿ ನಿಯಮಾನುಸಾರ ಕಟಾಯಿಸಿ, ಇಲಾಖೆಗೆ ಪಾವತಿಸುವುದು.
10. ಕಾಲೇಜುಗಳಿಗೆ ನೀಡಲಾಗಿರುವ ಸಾದಿಲ್ವಾರು ಸಾಮಾಗ್ರಿಗಳ ಖರೀದಿಯ ಬಾಬ್ತನ್ನು ಪಾಸ್ ಪುಸ್ತಕದ ಆಧಾರದ ಮೇಲೆ ನಗದು ಪುಸ್ತಕ ಹಾಗೂ ಲೆಡ್ಜರ್‌ನಲ್ಲಿ ದಾಖಲು ಮಾಡಬೇಕು. ಇದು ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕಕ್ಕೆ ತಾಳೆ ಹೊಂದುವಂತಿರಬೇಕು.

11. ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ, ಅದೇ ಉದ್ದೇಶಕ್ಕಾಗಿ ಮಾತ್ರ ವೆಚ್ಚ ಮಾಡಬೇಕು. ಇತರೆ ಚಟುವಟಿಕೆಗಳಿಗೆ ಕಡ್ಡಾಯವಾಗಿ ಬಳಸಬಾರದು. ಒಂದು ವೇಳೆ ಬಿಡುಗಡೆಯಾದ ಮೊತ್ತವನ್ನು ಅದೇ ಸಾಲಿನಲ್ಲಿ ಪೂರ್ಣವಾಗಿ ವೆಚ್ಚವಾಗದೇ ಬಾಕಿ ಉಳಿದಲ್ಲಿ ಅಂತಹ ಮೊತ್ತವನ್ನು ಮೇಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೆ ವೆಚ್ಚ ನಿರ್ವಹಿಸಬಾರದು.
12. ಎಲ್ಲಾ ಕಾಲೇಜು ಮುಖ್ಯಸ್ಥರುಗಳು ಈ ಬಗ್ಗೆ ಎಚ್ಚರಿಕೆ ವಹಿಸತಕ್ಕದ್ದು, ಇಲ್ಲದಿದ್ದಲ್ಲಿ ಉಂಟಾಗಬಹುದಾದ ಯಾವುದೇ ಲೋಪ ದೋಷಕ್ಕೆ ಸಂಬಂಧಿಸಿದ ಕಾಲೇಜು ಮುಖ್ಯಸ್ಥರುಗಳೇ ಜವಾಬ್ದಾರರಾಗುತ್ತಾರೆ.
13. ಕಾಲೇಜುಗಳ ಪ್ರಕಟಣಾ ಫಲಕದಲ್ಲಿ ಪ್ರತಿ ಸಾಲಿನಲ್ಲಿ ಸಾದಿಲ್ವಾರು ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಬಿಡುಗಡೆ ಆಗಿರುವ ಬಾಬ್ತು ಮತ್ತು ವೆಚ್ಚಗಳ ಬಗ್ಗೆ ಕಾಲಕಾಲಕ್ಕೆ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸುವುದು.
14. ಸದರಿ ಬಾಬ್ತಿನ ವೆಚ್ಚಗಳ ಪ್ರಗತಿಯ ವರದಿಯನ್ನು ವಿದ್ಯಾಧಿಕಾರಿರವರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.
15. ಲೆಕ್ಕ ಪತ್ರ ನಿರ್ವಹಣೆ ವಿಷಯದಲ್ಲಿ ಸಂದೇಹ ಮತ್ತು ಸಮಸ್ಯೆಗಳಿದ್ದಲ್ಲಿ ವಿದ್ಯಾಧಿಕಾರಿರವರನ್ನು ಸಂಪರ್ಕಿಸಿ ಸಂದೇಹ ಮತ್ತು ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದು.
16. ಕಛೇರಿಯಿಂದ ನೀಡಿರುವ ಹಾಗೂ ನೀಡಲಾಗುವ ಸೂಚನೆಗಳಿಗೆ ಅನುಸಾರವಾಗಿಯೇ ವೆಚ್ಚ ಮಾಡಬೇಕು. ಮಾರ್ಗಸೂಚಿಗೆ ವಿರುದ್ಧವಾಗಿ ಮಾಡಿದ ವೆಚ್ಚಗಳಿಗೆ ಕಾಲೇಜು ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ. ನಿಯಮ ಉಲ್ಲಂಘನೆ ಮಾಡಿದ್ದಲ್ಲಿ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು.

ಪ್ರಸಕ್ತ 2015–16ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜು/ಪದವಿ ಕಾಲೇಜುಗಳ ಸಾದಿಲ್ವಾರು ಸಾಮಾಗ್ರಿಗಳ ಖರೀದಿಯ ವೆಚ್ಚವನ್ನು ವಿದ್ಯಾರ್ಥಿಗಳ ಸಂಖ್ಯಾಬಲದ ಆಧಾರ ಪ್ರಮಾಣಾನುಸಾರ (ಪ್ರೋರೇಟಾ ಮೂಲಕ) ಹಂಚಿಕೆ ಮಾಡಿರುವ ಬಾಬ್ತನ್ನು ಬಿಡುಗಡೆ ಮಾಡಲು ತಗಲುವ ವೆಚ್ಚ ರೂ.7,59,250/–ಗಳನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಮೇಲ್ಕಂಡ ಲೆಕ್ಕ ಶೀರ್ಷಿಕೆಯಲ್ಲಿನ ಮೊತ್ತದಲ್ಲಿ ಭರಿಸಲು ಹಾಗೂ ಆಯಾ ಕಾಲೇಜುಗಳಿಗೆ ತಗಲುವ ಸಾದಿಲ್ವಾರು ಖರೀದಿಯ ವೆಚ್ಚದ ಮೊತ್ತವನ್ನು ಕಾಲೇಜುಗಳ ಜಂಟಿ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ನೀಡಲು ಹಾಗೂ ಉಳಿಕೆ ಮೊತ್ತ ರೂ.40,750.00ನ್ನು ಶಾಲಾ / ಕಾಲೇಜುಗಳ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ಸಣ್ಣಪುಟ್ಟ ದುರಸ್ಥಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿ ಅನುಮೋದನೆ ಕೋರಿ ಮಂಡಿಸಿರುವ **ಮಾನ್ಯ ವಿಶೇಷ ಆಯುಕ್ತರು (ಕಲ್ಯಾಣ)ರವರ ಪತ್ರದ ಸಂಖ್ಯೆ: ವಿದ್ಯಾ(1)ಪಿಆರ್/209/15–16, ದಿನಾಂಕ: 15.02.2016ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 25.02.2016ರ ಸಭೆಯ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 15.02.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***11]. ವಿಷಯದ ಸಂಖ್ಯೆ: ತೆಆಸ್ಥಾಸ/72/2015–16***

ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 28.01.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಾಹಾನಗರ ಪಾಲಿಕೆಯ ವತಿಯಿಂದ 89–ಶಿಶುವಿಹಾರ, 13–ಪ್ರಾಥಮಿಕ ಶಾಲೆ, 32–ಪ್ರೌಢಶಾಲೆ, 13–ಪದವಿ ಪೂರ್ವ ಕಾಲೇಜು ಮತ್ತು 04 ಪ್ರಥಮ ದರ್ಜೆ ಕಾಲೇಜುಗಳನ್ನು ನಡೆಸಲಾಗುತ್ತಿದ್ದು, 2015–16ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯಾಬಲ ಕೆಳಕಂಡಂತಿರುತ್ತದೆ.

| ವಿಧ | ಒಟ್ಟು ಸಂಖ್ಯೆ | ಮಕ್ಕಳ/ ವಿದ್ಯಾರ್ಥಿಗಳ ಸಂಖ್ಯೆ |
|---|---|---|
| ಶಿಶುವಿಹಾರ | 89 | 3929 |
| ಪ್ರಾಥಮಿಕ ಶಾಲೆಗಳು | 13 | 1702 |
| ಪ್ರೌಢಶಾಲೆ | 32 | 5561 |
| ಪದವಿ ಪೂರ್ವ | 13 | 4890 |
| ಪದವಿ ಕಾಲೇಜು | 04 | 877 |

ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿರವರು ಅಧ್ಯಕ್ಷರು, ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ.ರವರಿಗೆ ವಿಳಾಸ ಮಾಡಿರುವ ಉಲ್ಲೇಖ(1)ರ ಪತ್ರದಲ್ಲಿ, ಮಾನ್ಯರ ಮತ ಕ್ಷೇತ್ರ ವಾರ್ಡ್ ಸಂ:72, ಹೇರೋಹಳ್ಳಿಯಲ್ಲಿ ಬಡವರು, ಕೂಲಿ ಕಾರ್ಮಿಕರು, ತರಕಾರಿ ಮಾರುವವರು, ಆಟೋಡ್ರೈವರ್‌ಗಳು ವಾಸ ಮಾಡುತ್ತಿದ್ದು, ಇವರ ಮಕ್ಕಳಿಗೆ ಖಾಸಗಿ ಕಾಲೇಜುಗಳಲ್ಲಿ ದುಬಾರಿ ಶುಲ್ಕವನ್ನು ಪಾವತಿಸಿ ವಿದ್ಯಾಭ್ಯಾಸ ಮಾಡಿಸುವುದು ಕಷ್ಟಕರವಾಗಿರುವುದರಿಂದ. ಹೊಸದಾಗಿ ಪದವಿಪೂರ್ವ ಕಾಲೇಜು ಪ್ರಾರಂಭಿಸಿಸಲು ಕೋರಿರುತ್ತಾರೆ.

ವಿದ್ಯಾಧಿಕಾರಿಗಳು ಹಾಗೂ ಪ್ರಾಂಶುಪಾಲರು, ಹೇರೋಹಳ್ಳಿ ಪ್ರೌಢಶಾಲೆ.ರವರು ಮಂಡಿಸಿರುವ/ನೀಡಿರುವ ಮಾಹಿತಿಯಂತೆ, ವಾರ್ಡ್ ಸಂ:72, ಹೇರೋಹಳ್ಳಿಯಲ್ಲಿ 2011–12ನೇ ಸಾಲಿನಲ್ಲಿ ಪಾಲಿಕೆ ವತಿಯಿಂದ ಹೊಸದಾಗಿ ಪ್ರೌಢಶಾಲೆಯನ್ನು ತೆರೆಯಲಾಗಿದ್ದು, 2014–15ನೇ ಸಾಲಿನಲ್ಲಿ 250 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ಸದರಿ ಪ್ರೌಢಶಾಲೆಯ ಕಟ್ಟಡದಲ್ಲಿ ಸುಸಜ್ಜಿತವಾದ 14 ಕೊಠಡಿ, ಕಂಪ್ಯೂಟರ್ ಕೊಠಡಿ, ವಾಚನಾಲಯ ಕೊಠಡಿ, ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ ಮತ್ತು ಎಲ್ಲಾ ಅಗತ್ಯ ಮೂಲಭೂತ ಸೌಕರ್ಯವಿದ್ದು ಒಟ್ಟು 10 ಕೊಠಡಿಗಳನ್ನು ಪ್ರೌಢಶಾಲಾ ವಿಭಾಗಕ್ಕೆ ಬಳಸಲಾಗುತ್ತಿದೆ ಎಂದು ವರದಿ ಮಾಡಿರುತ್ತಾರೆ.

ಹೊಸದಾಗಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅನುಮತಿ ಪಡೆಯಬೇಕಾಗಿದ್ದು, ಪಾಲಿಕೆಯ ವತಿಯಿಂದ ವಾರ್ಡ್ ಸಂಖ್ಯೆ: 72, ಹೇರೋಹಳ್ಳಿಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢಶಾಲೆ ಕಟ್ಟಡದಲ್ಲಿ ಲಭ್ಯವಿರುವ ಸ್ಥಳಾವಕಾಶದಲ್ಲಿ 2016–17ನೇ ಸಾಲಿನಿಂದ ಹೊಸ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸುವ ಕುರಿತು ಕೆಳಕಂಡ ಅಂಶಗಳ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

1) ಕನ್ನಡ, ಆಂಗ್ಲ ಭಾಷೆಯ ಕಲಾ ಮತ್ತು ವಾಣಿಜ್ಯ ವಿಭಾಗವನ್ನು ಪ್ರಾರಂಭಿಸುವ ಕುರಿತು.
2) ಕಲಾ ವಿಭಾಗದಲ್ಲಿ–ಇತಿಹಾಸ, ಅರ್ಥಶಾಸ್ತ್ರ, ರಾಜಕೀಯ ಶಾಸ್ತ್ರ, ಸಮಾಜಶಾಸ್ತ್ರ ಹಾಗೂ ವಾಣಿಜ್ಯ ವಿಭಾಗದಲ್ಲಿ–ಇತಿಹಾಸ, ಅರ್ಥಶಾಸ್ತ್ರ, ವಾಣಿಜ್ಯ ಶಾಸ್ತ್ರ, ಲೆಕ್ಕಶಾಸ್ತ್ರ ವಿಷಯಗಳ ಸಂಯೋಜನೆಯನ್ನು ಅಳವಡಿಸುವ ಕುರಿತು.
3) ಕಾಲೇಜಿನ ಆಡಳಿತ ವ್ಯವಸ್ಥೆಗಾಗಿ ಒಬ್ಬ ಪ್ರಾಂಶುಪಾಲರು, ಪ್ರತಿ ನಿಕಾಯದ ವಿಷಯಗಳಿಗೆ ಒಬ್ಬರಂತೆ ಒಟ್ಟು 08 ಮಂದಿ ಉಪನ್ಯಾಸಕರು, ಒಬ್ಬ ದ್ವಿತಿಯ ದರ್ಜೆ ಸಹಾಯಕರು, ಒಬ್ಬ ವಾಚನಾಲಯ ನಿರ್ವಾಹಕರು, ಒಬ್ಬ 'ಡಿ'ದರ್ಜೆ ನೌಕರರರು ಮತ್ತು ಪೌರಕಾರ್ಮಿಕರ ಅಗತ್ಯವಿದ್ದು, ವಾರ್ಷಿಕ ಅಂದಾಜು ವೆಚ್ಚ ರೂ.52,17,600/–ಗಳನ್ನು ಪಾಲಿಕೆಯ ಆಯುವ್ಯಯದಿಂದ ಭರಿಸುವ ಬಗ್ಗೆ. (ಅನುಬಂಧ–1)
4) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಶಾಲಾ/ಕಾಲೇಜುಗಳಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಮೇಜು, ಕುರ್ಚಿ, ಡೆಸ್ಕ್‌ಗಳನ್ನು ಈ ಕಾಲೇಜಿಗೆ ಹಸ್ತಾಂತರಿಸುವ ಬಗ್ಗೆ.
5) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಕಂಪ್ಯೂಟರ್ ಮತ್ತು ಪುಸ್ತಕಗಳನ್ನು ಹಸ್ತಾಂತರಿಸುವ ಬಗ್ಗೆ.

ವಾರ್ಡ್ ಸಂ:72, ಹೇರೋಹಳ್ಳಿಯಲ್ಲಿ ಕಲಾ ಮತ್ತು ವಾಣಿಜ್ಯ ವಿಭಾಗಗಳನ್ನೊಳಗೊಂಡ ಹೊಸ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ತಗಲಬಹುದಾದ ಅಂದಾಜು ವಾರ್ಷಿಕ ಆಡಳಿತಾತ್ಮಕ ವೆಚ್ಚ ರೂ.52,17,600/–ಗಳ ಮೊತ್ತಕ್ಕೆ ಆರ್ಥಿಕ ಅನುಮೋದನೆ ಕುರಿತು ಹಾಗೂ ಪಾಲಿಕೆಯ ವಿವಿಧ ಶಾಲಾ/ಕಾಲೇಜುಗಳಲ್ಲಿ ಹೆಚ್ಚುವರಿಯಾಗಿ ಲಭ್ಯವಿರುವ ಪೀಠೋಪಕರಣ/ಕಂಪ್ಯೂಟರ್ ಮತ್ತು ಪುಸಕ್ತಗಳನ್ನು ಹಸ್ತಾಂತರಿಸಿಕೊಳ್ಳುವ ಬಗ್ಗೆ ಮೊದಲು ಶಿಕ್ಷಣ ಸ್ಥಾಯಿ ಸಮಿತಿಯ ಅವಗಾಹನೆಗೆ ತದನಂತರ ಆರ್ಥಿಕ ಮತ್ತು ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಸಂಪೂರ್ಣ ಕಡತದೊಂದಿಗೆ ಮಂಡಿಸಿರುವ **ಮಾನ್ಯ ವಿಶೇಷ ಆಯುಕ್ತರು (ಕಲ್ಯಾಣ)ರವರ ಪತ್ರದ ಸಂಖ್ಯೆ: ವಿದ್ಯಾ(2)ಪಿಆರ್‌ವಿ/83/15–16, ದಿನಾಂಕ: 28.01.2016ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 25.02.2016ರ ಸಭೆಯ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 28.01.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***12]. ವಿಷಯದ ಸಂಖ್ಯೆಃ ತೆಆಸ್ಥಾಸ/73/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜಾಜಿನಗರ ವಿಭಾಗ ವ್ಯಾಪ್ತಿಯಲ್ಲಿ ಖಾಸಗಿ ಕಟ್ಟಡಗಳ ಮಾಲೀಕರು ಕರ್ನಾಟಕ ಪೌರ ನಿಗಮಗಳ ಕಾಯ್ದೆ-1976, ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ಉಪ ವಿಧಿಗಳು-2003 ಹಾಗೂ ಚಾಲ್ತಿಯಲ್ಲಿರುವ ಎಲ್ಲಾ ನೀತಿ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದರಿಂದ ನಿಯಮಾನುಸಾರ ಈಗಾಗಲೇ ಕಟ್ಟಡಗಳ ಮಾಲೀಕರಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿ ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚಿಸಿರುತ್ತಾರೆ. ಆದರೆ ಕಟ್ಟಡಗಳ ಮಾಲೀಕರು ಸದರಿ ತಿಳಿವಳಿಕೆ ಪತ್ರಗಳಲ್ಲಿ ಸೂಚಿಸಿರುವಂತೆ ಅನಧಿಕೃತ ಕಟ್ಟಗಳ ಭಾಗಗಳನ್ನು ತೆರವುಗೊಳಿಸಲು ವಿಫಲರಾದುದರಿಂದ ಸದರಿ ಕಟ್ಟಡದ ಮಾಲೀಕರ ವಿರುದ್ಧ ನಿಯಮಾನುಸಾರ ಕರ್ನಾಟಕ ಪೌರ ನಿಗಮಗಳ ಕಾಯ್ದೆ-1976 ಪ್ರಕರಣ 462ರಂತೆ ಕಟ್ಟಡ ತೆರವು ಆದೇಶಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿರುತ್ತದೆ.

ಈ ರೀತಿ ಕರ್ನಾಟಕ ಪೌರ ನಿಗಮಗಳ ಕಾಯ್ದೆ-1976 ಪ್ರಕರಣ 462ರಂತೆ ಕಟ್ಟಡ ತೆರವು ಆದೇಶಗಳನ್ನು ನೀಡಲಾಗಿರುವ ಪ್ರಕರಣಗಳಲ್ಲಿ ಪಾಲಿಕೆಯಿಂದ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಿ ಪೌರ ನಿಗಮಗಳ ಕಾಯ್ದೆ-1976 ಪ್ರಕರಣ 463ರಂತೆ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಲಾಗಿರುವ ಕಟ್ಟಡದ ಮಾಲೀಕರಿಂದ ವಸೂಲಿ ಮಾಡಬೇಕಿರುತ್ತದೆ.

ಈಗಾಗಲೇ ಪ್ರಸ್ತಾಪಿತ 18 ಖಾಸಗಿ ಕಟ್ಟಡಗಳಲ್ಲಿ ಕೆಲವು ಕಟ್ಟಡಗಳ ವಿಚಾರವಾಗಿ ಕ್ರಮ ಕೈಗೊಳ್ಳುವಂತೆ ನ್ಯಾಯಾಲಯಗಳು ಆದೇಶಿಸಿದ್ದು ಹಾಗೂ ಕೆಲವು ಕಟ್ಟಡಗಳ ವಿಚಾರವಾಗಿ ಗೌ|| ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದೂರುಗಳು ದಾಖಲಾಗಿದ್ದು ಈ ಎಲ್ಲಾ ಖಾಸಗಿ ಕಟ್ಟಡಗಳ ವಿಚಾರವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲೇಬೇಕಿರುತ್ತದೆ.

ಅದರಂತೆ ಒಟ್ಟು 18 ಖಾಸಗಿ ಕಟ್ಟಡಗಳ ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಒಟ್ಟು ರೂ 1,09,91,198-00ಗಳ ಒಟ್ಟು 18 ಅಂದಾಜು ಪಟ್ಟಿಗಳನ್ನು ತಯಾರಿಸಿ 2015-16ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ: 94ರ ಲೆಕ್ಕಶೀರ್ಷಿಕೆ: ಪಿ-0055 ಒತ್ತುವರಿ ತೆರವು ವೆಚ್ಚಗಳು ಅಡಿಯಲ್ಲಿ ಭರಿಸಲು ಪ್ರಸ್ತಾಪಿಸಲಾಗಿರುತ್ತದೆ. ಆದರೆ, 2015-16ನೇ ಸಾಲಿನಲ್ಲಿ ಪ್ರಸ್ತಾಪಿತ ಲೆಕ್ಕಶೀರ್ಷಿಕೆಯಡಿ ಕೇವಲ ರೂ 20.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು ಬಾಕಿ ರೂ ಉಳಿಕೆ ರೂ 89.91198 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಇತರೆ ಮೂಲಗಳಲ್ಲಿ

ಬಳಕೆಯಾಗದಿರುವ / ಇತರೆ ಹೆಚ್ಚುವರಿಯಾಗಿ ಇತರೆ ಮೂಲಗಳಲ್ಲಿ ಬಳಕೆಯಾಗದಿರುವ / ಇತರೆ ಮೂಲಗಳಿಂದ ಮರು ಹೊಂದಾಣಿಕೆ ಮಾಡಿಕೊಂಡು ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***13]. ವಿಷಯದ ಸಂಖ್ಯೆಃ ತೆಆಸ್ಥಾಸ/74/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜಾಜಿನಗರ ವಿಭಾಗ ವ್ಯಾಪ್ತಿಯಲ್ಲಿ ಖಾಸಗಿ ಕಟ್ಟಡಗಳ ಮಾಲೀಕರು ಕರ್ನಾಟಕ ಪೌರ ನಿಗಮಗಳ ಕಾಯ್ದೆ-1976, ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ಉಪ ವಿಧಿಗಳು-2003 ಹಾಗೂ ಚಾಲ್ತಿಯಲ್ಲಿರುವ ಎಲ್ಲಾ ನೀತಿ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದರಿಂದ ನಿಯಮಾನುಸಾರ ಈಗಾಗಲೇ ಕಟ್ಟಡಗಳ ಮಾಲೀಕರಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿ ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚಿಸಿರುತ್ತಾರೆ. ಆದರೆ ಕಟ್ಟಡಗಳ ಮಾಲೀಕರು ಸದರಿ ತಿಳಿವಳಿಕೆ ಪತ್ರಗಳಲ್ಲಿ ಸೂಚಿಸಿರುವಂತೆ

ಅನಧಿಕೃತ ಕಟ್ಟಗಳ ಭಾಗಗಳನ್ನು ತೆರವುಗೊಳಿಸಲು ವಿಫಲರಾದುದರಿಂದ ಸದರಿ ಕಟ್ಟಡದ ಮಾಲೀಕರ ವಿರುದ್ಧ ನಿಯಮಾನುಸಾರ ಕರ್ನಾಟಕ ಪೌರ ನಿಗಮಗಳ ಕಾಯ್ದೆ–1976 ಪ್ರಕರಣ 462ರಂತೆ ಕಟ್ಟಡ ತೆರವು ಆದೇಶಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿರುತ್ತದೆ.

ಈ ರೀತಿ ಕರ್ನಾಟಕ ಪೌರ ನಿಗಮಗಳ ಕಾಯ್ದೆ–1976 ಪ್ರಕರಣ 462ರಂತೆ ಕಟ್ಟಡ ತೆರವು ಆದೇಶಗಳನ್ನು ನೀಡಲಾಗಿರುವ ಪ್ರಕರಣಗಳಲ್ಲಿ ಪಾಲಿಕೆಯಿಂದ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಿ ಪೌರ ನಿಗಮಗಳ ಕಾಯ್ದೆ–1976 ಪ್ರಕರಣ 463ರಂತೆ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಲಾಗಿರುವ ಕಟ್ಟಡದ ಮಾಲೀಕರಿಂದ ವಸೂಲಿ ಮಾಡಬೇಕಿರುತ್ತದೆ.

ಈಗಾಗಲೇ ಪ್ರಸ್ತಾಪಿತ 9 ಖಾಸಗಿ ಕಟ್ಟಡಗಳಲ್ಲಿ ಕೆಲವು ಕಟ್ಟಡಗಳ ವಿಚಾರವಾಗಿ ಕ್ರಮ ಕೈಗೊಳ್ಳುವಂತೆ ನ್ಯಾಯಾಲಯಗಳು ಆದೇಶಿಸಿದ್ದು ಹಾಗೂ ಕೆಲವು ಕಟ್ಟಡಗಳ ವಿಚಾರವಾಗಿ ಗೌ॥ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದೂರುಗಳು ದಾಖಲಾಗಿದ್ದು ಈ ಎಲ್ಲಾ ಖಾಸಗಿ ಕಟ್ಟಡಗಳ ವಿಚಾರವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲೇಬೇಕಿರುತ್ತದೆ.

ಅದರಂತೆ ಒಟ್ಟು 9 ಖಾಸಗಿ ಕಟ್ಟಡಗಳ ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಒಟ್ಟು ರೂ 23,81,250–00ಗಳ ಒಟ್ಟು 9 ಅಂದಾಜು ಪಟ್ಟಿಗಳನ್ನು ತಯಾರಿಸಿ 2015–16ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ: 94ರ ಲೆಕ್ಕಶೀರ್ಷಿಕೆ: ಪಿ–0055 ಒತ್ತುವರಿ ತೆರವು ವೆಚ್ಚಗಳು ಅಡಿಯಲ್ಲಿ ಭರಿಸಲು ಪ್ರಸ್ತಾಪಿಸಲಾಗಿರುತ್ತದೆ. ಆದರೆ, 2015–16ನೇ ಸಾಲಿನಲ್ಲಿ ಪ್ರಸ್ತಾಪಿತ ಲೆಕ್ಕಶೀರ್ಷಿಕೆಯಡಿ ಕೇವಲ ರೂ 8.48 ಲಕ್ಷಗಳ ಅನುದಾನ ಲಭ್ಯವಿದ್ದು ಬಾಕಿ ರೂ ಉಳಿಕೆ ರೂ 13,33,250–00 ಗಳ ಅನುದಾನವನ್ನು ಹೆಚ್ಚುವರಿಯಾಗಿ ಇತರೆ ಮೂಲಗಳಲ್ಲಿ ಬಳಕೆಯಾಗದಿರುವ

/ ಇತರೆ ಹೆಚ್ಚುವರಿಯಾಗಿ ಇತರೆ ಮೂಲಗಳಲ್ಲಿ ಬಳಕೆಯಾಗದಿರುವ / ಇತರೆ ಮೂಲಗಳಿಂದ ಮರು ಹೊಂದಾಣಿಕೆ ಮಾಡು ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *14]. ವಿಷಯದ ಸಂಖ್ಯೆ: ತೆಆಸ್ಥಾಸ/75/2015–16*

ಆಯುಕ್ತರ ದಿನಾಂಕ: 23.02.2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ, 2016–17ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣವನ್ನು ದಿನಾಂಕ: 01.02.2016 ರಿಂದ ಪ್ರಾರಂಭಿಸಲಾಗಿದೆ. ಫೆಬ್ರವರಿ ಮಾಹೆಯಲ್ಲಿ ದಂಡವಿಲ್ಲದೆ ಉದ್ದಿಮೆ ಪರವಾನಿಗೆ ನವೀಕರಣ ಮಾಡುತ್ತಿದ್ದು, ಮಾರ್ಚ್ ಮಾಹೆಯಲ್ಲಿ ಶೇ.25% ರಷ್ಟು ಹಾಗೂ ಏಪ್ರಿಲ್ ರಿಂದ ಜೂನ್ ಅಂತ್ಯದವರೆಗೆ ಶೇ.100% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಣವನ್ನು ಮಾಡಲಾಗುತ್ತಿದೆ. ಹಿಂದಿನ ವರ್ಷಗಳಲ್ಲಿ ಜುಲೈ 1ರಿಂದ ಉದ್ದಿಮೆ ಪರವಾನಿಗೆ ತಂತಾನೆ ರದ್ದು ಆಗಲಿದ್ದು ಉದ್ದಿಮೆಯನ್ನು ಮುಚ್ಚಲು ಕ್ರಮವಹಿಸಲಾಗುತ್ತಿತ್ತು. ಇದರಿಂದಾಗಿ ಉದ್ದಿಮೆದಾರರು ಜುಲೈ 1ರ ನಂತರ ಹೊಸದಾಗಿ ಪರವಾನಿಗೆ ಪಡೆಯುತ್ತಿದ್ದು ಇದರಿಂದಾಗಿ ಪಾಲಿಕೆಗೆ ಆರ್ಥಿಕವಾಗಿ ನಷ್ಟವಾಗುತ್ತಿತ್ತು. ಈ ಬಗ್ಗೆ ಮಾನ್ಯ ವಿಶೇಷ ಆಯುಕ್ತರು ತಮ್ಮ ಟಿಪ್ಪಣಿಯಲ್ಲಿ ಜುಲೈ 1ರ ನಂತರ ಉದ್ದಿಮೆ ಪರವಾನಿಗೆಯನ್ನು ಶೇ.200% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕೆ.ಎಂ.ಸಿ. ಕಾಯ್ದೆ ಹಾಗೂ ಬೈಲಾಗಳಲ್ಲಿ ಉದ್ದಿಮೆ ಪರವಾನಿಗೆಯನ್ನು 3 ವರ್ಷಗಳವರೆಗೆ ನವೀಕರಿಸಲು ಅವಕಾಶವಿರುತ್ತದೆ.

ಅದರಂತೆ, ಜುಲೈ 1ರಿಂದ 3 ವರ್ಷಗಳ ಅವಧಿ ತನಕ ಶೇ.200% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *15]. ವಿಷಯದ ಸಂಖ್ಯೆಃ ತೆಆಸ್ಥಾಸ/76/2015-16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 14ನೇ ಹಣಕಾಸು ಆಯೋಗದ ಶಿಪಾರಸ್ಸಿನ ಅನ್ವಯ ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಗೆ ತಿಳಿಸಿರುವಂತೆ ಮೂಲ ಸೇವೆ ಒದಗಿಸಲು 2015-16 ನೇ ಸಾಲಿನಿಂದ 2019-2020 ನೇ ಸಾಲಿನ ವರೆಗಿನ ಅವಧಿಗೆ ಒಟ್ಟಾರೆ ರೂ. 4685.51 ಕೋಟಿಗಳ ಸಾಮಾನ್ಯ ಮೂಲ ಅನುದಾನ (General Basic Grant)ವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಹಂಚಿಕೆ ಮಾಡಿ, ವಾರ್ಷಿಕ ಅನುದಾನವನ್ನು ಪ್ರಮಾಣಕ್ಕನುಸಾರವಾಗಿ ಉಪಯೋಗಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 245 ಎಸ್.ಎಫ್.ಸಿ 2015 / ದಿನಾಂಕ 17-7-2015 ರ ಆದೇಶದಲ್ಲಿ ಸೂಚಿಸಲಾಗಿದೆ. ಸರ್ಕಾರದ ಆದೇಶದಲ್ಲಿ 2015-16 ನೇ ಸಾಲಿಗೆ ಒಟ್ಟು ರೂ. 562.08 ಕೋಟಿಗಳ ಅನುದಾನ ಒದಗಿಸಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ. 173.33 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದಿಂದ ಬಿ.ಬಿ.ಎಂ.ಪಿಗೆ ನಿಗಧಿಪಡಿಸಿರುವ ರೂ. 173.33 ಕೋಟಿಗಳ ಅನುದಾನದಲ್ಲಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015 / ದಿನಾಂಕ 05-01-2016 ರಲ್ಲಿ ಈ ಕೆಳಕಂಡಂತೆ ವಾರ್ಡ್‌ವಾರು ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ.

| ಕ್ರಮ ಸಂಖ್ಯೆ | ವಿವರ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಕುಡಿಯುವ ನೀರು ಕಾಮಗಾರಿಗಳು | 2800.00 |
| 2 | ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ | 1098.05 |
| 3 | ಒಳ ಚರಂಡಿ ವ್ಯವಸ್ಥೆ ಕಾಮಗಾರಿಗಳು | 2600.00 |
| 4 | ಘನತ್ಯಾಜ್ಯ ವಸ್ತುಗಳ ನಿರ್ವಹಣೆ | 3234.95 |
| 5 | ಮಳೆ ನೀರು ಚರಂಡಿ ಕಾಮಗಾರಿಗಳು. | 2100.00 |
| 6 | ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ) | 600.00 |
| 7 | ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ | 2500.00 |
| 8 | ವಿದ್ಯುತ್ ಬೀದಿ ದೀಪಗಳ ಅಳವಡಿಕೆ / ನಿರ್ವಹಣೆ/ವಿದ್ಯುತ್ ಉಳಿತಾಯ ಕ್ರಮಗಳು | 1700.00 |
| 9 | ಸ್ಮಶಾನ/ ಚಿತಾಗಾರ/ ಕಬೇರಿ ನಿರ್ವಹಣೆ | 400.00 |
| | **ಒಟ್ಟು** | **17033.00** |

14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿ ಹಂಚಿಕೆ ಮಾಡಿರುವ ಒಟ್ಟಾರೆ ಅನುದಾನದ ಕಾಮಗಾರಿಗಳಿಗೆ ಒಂದೇ ಲೆಕ್ಕಶೀರ್ಷಿಕೆ ಅಡಿ ಜಾಬ್‌ಸಂಖ್ಯೆ ನೀಡುವುದು ಸೂಕ್ತವಾಗಿರುತ್ತದೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ನೀರಿಕ್ಷಿಸಿ 2015-16 ನೇ ಸಾಲಿನ ಆಯವ್ಯಯದಲ್ಲಿ "14ನೇ ಹಣಕಾಸು ಆಯೋಗದ ಅನುದಾನದ ಕಾಮಗಾರಿಗಳು" ಪಿ3110 ಎಂಬ ಪ್ರತ್ಯೇಕ ಲೆಕ್ಕಶೀರ್ಷಿಕೆ ಸೃಜಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. ಪ್ರಸ್ಥುತ ಕುಡಿಯುವ ನೀರು, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಮಳೆ ನೀರು ಚರಂಡಿಗಳು, ಸಮುದಾಯ ಆಸ್ತಿಗಳ ನಿರ್ವಹಣೆ, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ, ವಿದ್ಯುತ್ ಬೀದಿ ದೀಪಗಳ ನಿರ್ವಹಣೆ ಹಾಗೂ ಸ್ಮಶಾನ ಮತ್ತು ಚಿತಾಗಾರಗಳ ನಿರ್ವಹಣೆಯ ಒಟ್ಟು 205 ಕಾಮಗಾರಿಗಳ ಅನುಮೋದಿತ ಮೊತ್ತ ರೂ. 13235.95 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಒಳಚರಂಡಿ ವ್ಯವಸ್ಥೆಯ ಮೊತ್ತ ರೂ.2600.00 ಲಕ್ಷಗಳ ಕಾಮಗಾರಿಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೊಳ್ಳಲಾಗುವುದು. 2015-16 ನೇ ಸಾಲಿಗೆ ಒದಗಿಸಿರುವ ಅನುದಾನದ ಮೊತ್ತ ರೂ. 17333.00 ಲಕ್ಷಗಳ ಅನುದಾನವನ್ನು 2015-16 ನೇ ಸಾಲಿನ ಪರಿಷ್ಕೃತ ಆಯವಯ್ಯದಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಲೆಕ್ಕಶೀರ್ಷಿಕೆ ಪಿ-3110 ಸೃಜಿಸಿಕೊಂಡು ರೂ. 13235.95 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಉಳಿಕೆ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಮೊತ್ತ ರೂ. 1098.05 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

***16]. ವಿಷಯದ ಸಂಖ್ಯೆ: ತೆಆಸ್ಥಾಸ/77/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 29/01/2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಹಾಲಕ್ಷ್ಮೀಪುರ ವಿಭಾಗ, ವಾರ್ಡ್ ಸಂಖ್ಯೆ: 67ರ ನಾಗಪುರ ಉಪ ವಿಭಾಗ ವ್ಯಾಪ್ತಿಯ ನಂ. 18, 4ನೇ ಕ್ರಾಸ್, 19ನೇ 'ಬಿ' ಮೈನ್, 1ನೇ 'ಎನ್' ಬ್ಲಾಕ್, ರಾಜಾಜಿನಗರ ಬೆಂಗಳೂರು-10 ಇಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕಟ್ಟಡವನ್ನು ಮಧುಮೇಹ ಕೇಂದ್ರ ನಡೆಸಲು ಜಸ್ಟಿಸ್ ಕುರಂಗ ಚಾರಿಟೆಬಲ್ ಫೌಂಡೇಶನ್ ರವರು ಕೋರಿರುತ್ತಾರೆ.

ಮಧುಮೇಹ ಕೇಂದ್ರದ ನಿರ್ವಹಣೆಗೆ ತಗಲುವ ಎಲ್ಲಾ ವೆಚ್ಚಗಳನ್ನು ಜಸ್ಟಿಸ್ ಕುರಂಗ ಚಾರಿಟೆಬಲ್ ಫೌಂಡೇಶನ್ ಬಿನ್ ಹನುಮಂತಯ್ಯ ನಿವೃತ್ತ ಮುಖ್ಯ ನ್ಯಾಯಾಧೀಶರು ರವರೇ ಭರಿಸಲು ಒಪ್ಪಿ ಸದರಿ ಕಟ್ಟಡವನ್ನು ನೀಡಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ವಾರ್ಡ್ ಸಂಖ್ಯೆ-67ರ ನಾಗಪುರ ಉಪ ವಿಭಾಗ ವ್ಯಾಪ್ತಿಯ ನಂ. 18, 4ನೇ ಕ್ರಾಸ್, 19ನೇ 'ಬಿ' ಮೈನ್, 1ನೇ 'ಎನ್' ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಇಲ್ಲಿ ನೂತನವಾಗಿ ಈಗಾಗಲೇ ಕಟ್ಟಡ ನಿರ್ಮಿಸಲಾಗಿದ್ದು, ಕಟ್ಟಡದ ವಿವರಗಳು ಕೆಳಕಂಡಂತೆ ಇರುತ್ತದೆ.

**<u>ಕಟ್ಟಡದ ವಿವರ:-</u>**

| | |
|---|---|
| ನೆಲ ಅಂತಸ್ತು | : 20 x 30 ಚ. ಅಡಿ |
| ಮೊದಲನೆ ಮಹಡಿ | : 20 x 30 ಚ. ಅಡಿ |

**<u>ಯಂತ್ರೋಪಕರಣಗಳ ವಿವರ:-</u>**

| | |
|---|---|
| ಪ್ರೋಜಕ್ಟರ್ ಮತ್ತು ಸ್ಕ್ರೀನ್ | : 1 |
| ಫ್ಯಾನ್ | : 5 |
| ಚೇರ್ | : 6 |
| ಎಕ್ಸಿಕ್ಯೂಟಿವ್ ಚೇರ್ | : 2 |
| ಫೈಲ್ ರ್‍ಯಾಕ್ | : 1 |
| 3 ಸೀಟ್ ಸೋಫ | : 2 |

'ಕೆ.ಎಂ.ಸಿ ಕಾಯ್ದೆ 176ರ ಸ್ವತ್ತು ಮತ್ತು ಅದರಲ್ಲಿನ ಹಿತಾಸಕ್ತಿಯ ವಿಲೆ' ಪ್ರಕಾರ ಆಯುಕ್ತರು ಸ್ಥಾಯಿ ಸಮಿತಿಯ ಮಂಜೂರಾತಿಯೊಡನೆ ನಿಗಮದ ಯಾವುದೇ ಸ್ಥಿರ ಸ್ವತ್ತನ್ನು ಬಾಡಿಗೆಗೆ ಅಥವಾ ರಿಯಾಯಿತಿಗೆ ಮೂರು ವರ್ಷಗಳ ಅವಧಿಗೆ ವಹಿಸಿ ಕೊಡಬಹುದಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಮಹಾಲಕ್ಷ್ಮೀಪುರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ 67ರ ನಾಗಪುರ ಉಪ ವಿಭಾಗ ವ್ಯಾಪ್ತಿಯ ನಂ.18, 4ನೇ ಕ್ರಾಸ್, 19ನೇ 'ಬಿ' ಮೈನ್, 1ನೇ 'ಎನ್' ಬ್ಲಾಕ್, ರಾಜಾಜಿನಗರ, ಬೆಂಗಳೂರು-10ರಲ್ಲಿ ಮಧುಮೇಹ ಕೇಂದ್ರ ನಡೆಸಲು ಜಸ್ಟಿಸ್ ಕುರಂಗ ಚಾರಿಟೆಬಲ್ ಫೌಂಡೇಶನ್ ರವರೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳಲು ಅನುಮತಿಯನ್ನು ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ **'ದಿನಾಂಕ: 29/01/2016ರ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿಯನ್ನು ಪರಿಶೀಲಿಸಿ, ಜಸ್ಟಿಸ್ ಕುರಂಗ ಚಾರಿಟೆಬಲ್ ಫೌಂಡೇಶನ್ ರವರಿಗೆ ಮಧುಮೇಹ ಕೇಂದ್ರ ನಡೆಸಲು ಮೇಲ್ಕಂಡ ಸ್ಥಿರ ಸ್ವತ್ತನ್ನು ಮೂರು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01.03.2016ರ ಸಭೆಯ ನಿರ್ಣಯ.'**

**<u>ನಿರ್ಣಯ:</u>** **<u>ನಗರ ಯೊಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01.03.2016ರ ಸಭೆಯ ನಿರ್ಣಯವನ್ನು ಒಪ್ಪುತ್ತಾ, ವಾರ್ಷಿಕ ರೂ.10,000/-ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ, ನಿಯಮಾನುಸಾರ ಅಗತ್ಯ ಷರತ್ತುಗಳನ್ನು ಒಳಪಡಿಸಿ ಗುತ್ತಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.</u>**

**_17]. ವಿಷಯದ ಸಂಖ್ಯೆ: ತೆಆಸ್ಥಾಸ/78/2015–16_**

ಆಯುಕ್ತರ ದಿನಾಂಕ: 12–03–2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ಕೆಲಸ ಕಾರ್ಯಗಳ ನಿರ್ವಹಣೆಗೆ ಅಗತ್ಯವಿರುವ 116 ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಸೇವೆ ಅತ್ಯಗತ್ಯವಾಗಿರುವ ಮೇರಗೆ ದಿನಾಂಕ: 22.06.2015 ರಂದು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿರುತ್ತದೆ.

**ಪಾಲಿಕೆಗೆ ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಅವಶ್ಯಕತೆ ಟೆಂಡರ್‌ನಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿತ್ತು.**

| Sl. No. | Designation | No.of Posts |
|---|---|---|
| 1. | Customer Support Representative | 110 |
| 2. | Shift Supervisor | 03 |
| 3. | Shift Manager | 01 |
| 4. | System Network Engineer | 02 |
| | **Total** | **116** |

ಅದರಂತೆ L1 ಸಂಸ್ಥೆಯಾದ M/S Cyber Futuristics India Pvt ltd ರವರಿಂದ ಬಿಡ್ಡನ್ನು ಸ್ವೀಕರಿಸಿದ್ದು, ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರ ಅನುಮೋದನೆಯಂತೆ 116 ಸಿಬ್ಬಂದಿಗಳಲ್ಲಿ 50 ಸಿಬ್ಬಂದಿಗಳನ್ನು ಕಡಿತ ಗೊಳಿಸಿ 66 ನಿಯಂತ್ರಣ ಕೊಠಡಿ ಸಿಬ್ಬಂದಿಗಳ ವಿವರ ಮತ್ತು ವೇತನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

**_66 ಸಿಬ್ಬಂದಿಗಳ ವಿವರ ಈ ಕೆಳಕಂಡಂತಿರುತ್ತದೆ._**

| Sl. No. | Designation | No.of Posts |
|---|---|---|
| 1. | Customer Support Representative | 60 |
| 2. | Shift Supervisor | 03 |
| 3. | Shift Manager | 01 |
| 4. | System Network Engineer | 02 |
| | **Total** | **66** |

**_ಪ್ರತಿ ಮಾಹೆಗೆ ತಗಲುವ ವೆಚ್ಚದ ವಿವರ_**

| Sl. No. | Designation | Basic | ESI @ 4.75% | PF @ 13.61% | Wages for weekly holiday @ 4days / month | Wages for national & Festival Holidays 10 Days per year | Leave with wages @ 1.5 days per month (calculated at 1 day for 20 days of actual work) | Total Salary (A+B+C+D+E+F) | Service charges | No.of Posts | Total cost per month G+H | Grand Total I*J |
|---|---|---|---|---|---|---|---|---|---|---|---|---|
| | | A | B | C | D | E | F | G | H | I | J | K |
| 1. | Customer Support Representative | 9110 | 433 | 1240 | 1438 | 3594 | 539 | 16354 | 7557 | 60 | 23911 | 14,34,660 |
| 2. | Shift Supervisor | 11440 | 542 | 1552 | 1799 | 4498 | 675 | 20466 | 5800 | 03 | 26266 | 78,798 |
| 3. | Shift Manager | 14230 | 676 | 1937 | 2246 | 5614 | 842 | 25545 | 3600 | 01 | 29145 | 29,145 |
| 4. | System Network Engineer | 17790 | 845 | 2421 | 2807 | 7019 | 1053 | 31935 | 3600 | 02 | 35535 | 71,070 |
| | | | | | | | | **Total** | | | | **16,13,673** |
| **SIXTEEN LAKHS THIRTEEN THOUSANDS SIX HUNDRED SEVENTY THREE ONLY** | | | | | | | | | | | | |

**<u>A one time cost of implementation:</u>**

| Sr. | Item | Unit | Qty | Total Amount in INR (inclusive of all the taxes and other charges) |
|---|---|---|---|---|
| 1. | Media Gateway | No. | 1 | 59,000 |
| 2. | ACD Server Installation | No. | 2 | 1,38,000 |
| 3. | Digital Voice Logger Setup and installation | No. | 1 | 1,47,000 |

| | | | | |
|---|---|---|---|---|
| 4. | Application Server Installation | No. | 2 | 36,323 |
| 5. | Database Server Setup | No. | 2 | 19,523 |
| 6. | Backup Server installation with Hot swap redundancy | No. | 1 | 23,500 |
| 7. | Agent application license | No. | 40 | Inclusive |
| 8. | Supervisor console with agent monitoring | No. | 5 | Inclusive |
| 9. | headsets for call centre executives Phones (reputed Brands like CISCO / polycom…) with earphones and MIC with good ambient noise cancellation facility | No. | 40 | 46,000 |
| 10. | IP Phones (reputed Brands like CISCO/polycom…) | No. | 40 | 3,40,000 |
| 11. | ontegration of Video Wall with CRM and Call Centre Management System | No. | 1 | 40,000 |
| 12. | Domain Server with single sigh on setup and configuration with load balance | No. | 1 | 1,50,000 |
| 13. | Any other Services/components required | No. | | |
| **Total** | | | | **9,99,346** |

M/S Cyber Futuristics India Pvt ltd ಸಂಸ್ಥೆಯವರಿಂದ ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಸೇವೆಗಳನ್ನು ಒಟ್ಟು 36 ತಿಂಗಳಿಗೆ (03 ವರ್ಷಕ್ಕೆ) ಪಡೆಯಲು ಒಟ್ಟು ವೆಚ್ಚ ರೂ. 5,80,92,228/- (ಐದು ಕೋಟಿ ಎಂಭತ್ತು ಲಕ್ಷದ ತೊಂಭತ್ತೆರಡು ಸಾವಿರದ ಇನ್ನೂರ ಇಪ್ಪತ್ತೆಂಟು ರೂಪಾಯಿಗಳು) ಗಳಾಗಿರುತ್ತವೆ. (ಸದರಿ ವೆಚ್ಚದಲ್ಲಿ ಸೇವಾ ತೆರಿಗೆ ಹೊರತುಪಡಿಸಿ) ಮತ್ತು A one time cost of implementation ವೆಚ್ಚ 9,99,346/- ರೂ.ಗಳು ಸೇರಿ ಒಟ್ಟು 5,90,91,574/- (ಐದು ಕೋಟಿ ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಐನೂರ ಎಪ್ಪತ್ತನಾಲ್ಕು ರೂಪಾಯಿಗಳು ಮಾತ್ರ) ರೂ.ಗಳಾಗುತ್ತವೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗಾಗಿ ತರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸ ಕಾರ್ಯಗಳ ಸುಸೂತ್ರ ನಿರ್ವಹಣೆಯ ದೃಷ್ಟಿಯಿಂದ ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಕ್ರಮ ಜರುಗಿಸಬೇಕಾಗಿರುವುದರಿಂದ ಟೆಂಡರ್ ಅನುಮೋದನೆ ಪಡೆಯಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಪ್ರಸ್ತಾವನೆ.

-ಮುಂದೂಡಿದೆ-

## *18]. ವಿಷಯದ ಸಂಖ್ಯೆ: ತೆಆಸ್ಥಾಸ/79/2015-16*

ಆಯುಕ್ತರ ದಿನಾಂಕ: 05-01-2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಕೆ. ಜೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರು ಕ್ರಯಕ್ಕೆ ನೀಡಲು ಕೋರಿರುವ ಮನವಿ ಪತ್ರದಲ್ಲಿ ವಾರ್ಡ್ ಸಂಖ್ಯೆ:81ರಲ್ಲಿ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ ಎಂದು ಅದೇ ರೀತಿ ನನಗೂ ಸಹ ಈ ವಸತಿಗೃಹ ಮಾರಾಟ ಮಾಡುವಂತೆ ಅನೇಕ ಮನವಿಗಳನ್ನು ಹಿಂದಿನಿಂದಲೂ ನೀಡುತ್ತಾ ಬಂದಿದ್ದು, ಈ ಹಿಂದೆ ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ವಿಷಯ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರವು ತನ್ನ ಆದೇಶದ ಸಂಖ್ಯೆ: ನಅಇ/279/ಎಂಎನ್‌ಜಿ/03, ದಿನಾಂಕ:25-10-2005ರಂತೆ ದಿನಾಂಕ:27-07-2003ರ ಬಿಬಿಎಂಪಿ ಸಭೆಯ ವಿಷಯದ ಸಂಖ್ಯೆ: 10(284)ರ ನಿರ್ಣಯವನ್ನು ರದ್ದುಪಡಿಸಿರುತ್ತದೆ.

ಪುನಃ ಮಹಾನಗರ ಪಾಲಿಕೆ ಸದಸ್ಯರು/ಸಚಿವರುಗಳು ಕ್ರಯಕ್ಕೆ ನೀಡಲು ಶಿಫಾರಸ್ಸು ಮಾಡಿ ಅನುಕಂಪದ ಆಧಾರದ ಮೇಲೆ ಕ್ರಯಕ್ಕೆ ಮಂಜೂರು ಮಾಡಲು ಕೋರಿರುವ ಸಂಬಂಧ ಪಾಲಿಕೆ ಸಭೆಯ ಮುಂದೆ ಮರು ಮಂಡಿಸಲು ಕೋರಿದ್ದು, ಈ ಮೇರೆಗೆ ಸ್ಥಾಯಿ ಸಮಿತಿಗಳ ಮುಖಾಂತರ ಬಿಬಿಎಂಪಿ ಸಭೆಯ ಮುಂದೆ ಮಂಡಿಸಲಾಗಿದ್ದು, ದಿನಾಂಕ: 07-02-2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ದಿನಾಂಕ: 22-11-2012ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ವಿಷಯ ಸಂಖ್ಯೆ: 10(311) 2012-13, ದಿನಾಂಕ:29-12-2012ರ ಬಿಬಿಎಂಪಿ ಸಭೆಯಲ್ಲಿ ಒಪ್ಪಿ ಕ್ರಯಕ್ಕೆ ನೀಡಲು ತೀರ್ಮಾನಿಸಿರುವ ಮೇರೆಗೆ ಪಾಲಿಕೆಯ ನಿರ್ಣಯದ ಬಗ್ಗೆ ಸೂಕ್ತ ಆದೇಶ ಹೊರಡಿಸಲು ಸರ್ಕಾರವನ್ನು ಕೋರಲಾಗಿತ್ತು.

ಈ ಮೇರೆಗೆ ಕೌನ್ಸಿಲ್ ನಿರ್ಣಯದಂತೆ ಶ್ರೀಮತಿ. ರುಕ್ಮಿಣಿ ಯವರಿಗೆ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಸಂಬಂಧ ಸರ್ಕಾರವು ಆಕ್ಷೇಪಣೆ ವ್ಯಕ್ತಪಡಿಸಿ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೋರಿರುತ್ತದೆ. ಸದರಿ

ವಿಷಯದಲ್ಲಿ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿ, ಕಾನೂನು ಶಾಖೆಯ ಅಭಿಪ್ರಾಯದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002 ದಿನಾಂಕ:02-06-2003 ರನ್ವಯ ಸಾರ್ವಜನಿಕ ಹರಾಜು ಮೂಲಕವೇ ವಿಲೇವಾರಿ ಮಾಡಬೇಕಾಗಿರುವುದರಿಂದ ವಿಷಯದ ಸಂಖ್ಯೆ:10(311)2012-13, ದಿನಾಂಕ:29-12-2012ರ ಬಿಬಿಎಂಪಿ ಸಭೆಯ ತೀರ್ಮಾನವು ಕೆ.ಎಂ.ಸಿ. ಕಾಯ್ದೆಗೆ ಮತ್ತು ನ್ಯಾಯಾಲಯದ ಆದೇಶದ ವಿರುದ್ಧ ಇರುವುದರಿಂದ ಕೆ.ಎಂ.ಸಿ. ಕಾಯ್ದೆ ಕಲಂ 72 ರನ್ವಯ ದಿನಾಂಕ:29-12-2012ರ ಪಾಲಿಕೆ ಸಭೆಯ ತೀರ್ಮಾನವನ್ನು ರದ್ದು ಪಡಿಸಲು ದಿನಾಂಕ:07-01-2014ರಂದು ಕೋರಲಾಗಿತ್ತು.

ಈ ಮೇರೆಗೆ ವಿಷಯದ ಸಂಖ್ಯೆ: ತೆಆಸ್ಥಾಸ/109/2012-13, ದಿನಾಂಕ:22-11-2012 ಹಾಗೂ ಪಾಲಿಕೆಯ ವಿಷಯದ ಸಂಖ್ಯೆ : 10 (311) 2012-13, ದಿನಾಂಕ: 29-12-2012ರ ನಿರ್ಣಯಗಳು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02-06-2003ರನ್ನು ಉಲ್ಲಂಘಿಸಿದಂತಾಗುವುದರಿಂದ ಸದರಿ ನಿರ್ಣಯಗಳನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕೆ.ಎಂ.ಸಿ ಕಾಯ್ದೆ 1976ರ ಕಲಂ 98(2) ರನ್ವಯ ನೋಟೀಸ್ ಜಾರಿ ಮಾಡಿ ನಿರ್ಣಯಗಳನ್ನು ರದ್ದುಗೊಳಿಸುವ ಬಗ್ಗೆ ಸಮಜಾಯಿಷಿಗಳೇನಾದರೂ ಇದ್ದಲ್ಲಿ ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿಯಿಂದ ಸಮಜಾಯಿಷಿ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿದೆ.

ಆದುದರಿಂದ, ದಿನಾಂಕ:02-06-2015ರಂದು ನೀಡಿರುವ ಕಾರಣ ಕೇಳುವ ನೋಟೀಸ್‌ಗೆ ಸಮಜಾಯಿಷಿ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬಿಬಿಎಂಪಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ:</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-93 (ಹಳೆ ವಾರ್ಡ್ ಸಂಖ್ಯೆ-78) ಶಿವಾಜಿನಗರ 4ನೇ ಅಡ್ಡರಸ್ತೆಯಲ್ಲಿರುವ ಪಾಲಿಕೆ ವಸತಿಗೃಹದ ಸಂಖ್ಯೆ: 32/1 ಅನ್ನು ಮಾಜಿ ನಗರ ಸಭಾ ಸದಸ್ಯರಾದ ದಿವಂಗತ ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ಇವರಿಗೆ ಕ್ರಯಕ್ಕೆ ನೀಡುವ ಕುರಿತಂತೆ ಹಿಂದಿನ ದಿನಾಂಕ:07-02-2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ನಯೋಅಸ್ಥಾಸ/209/2011-12ರ ನಿರ್ಣಯವನ್ನು ರದ್ದು ಪಡಿಸುವ ಕುರಿತಂತೆ ಸಮಜಾಯಿಷಿ ನೀಡಲು ಘನ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಆಯುಕ್ತರ ದಿನಾಂಕ:05-01-2016ರ ಸಂಖ್ಯೆ:ಎ3(2)/ಪಿ.ಆರ್/04/2002-03ರ ಟಿಪ್ಪಣಿ ಕುರಿತಂತೆ ಹಾಜರಿದ್ದ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಶ್ರೀ. ಸಂಪತ್‌ರಾಜ್ .ಆರ್, ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ-47 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸದಸ್ಯರು ರವರು ದಿನಾಂಕ:25-02-2016ರಂದು ಮನವಿಯೊಂದನ್ನು ಸಲ್ಲಿಸಿ, 2016ನೇ ಸಾಲಿನಲ್ಲಿ ಡಾ। ಬಿ.ಆರ್. ಅಂಬೇಡ್ಕರ್ ರವರ 125 ಜನ್ಮ ದಿನಾಚರಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷವಾಗಿ ಆಚರಿಸುತ್ತಿದ್ದು, ಪರಿಶಿಷ್ಟ ಜಾತಿ/ಪಂಗಡದವರ ಏಳಿಗೆಗಾಗಿ ನಿಸ್ವಾರ್ಥ ಮನೋಭಾವದಿಂದ ಶ್ರಮಿಸಿದ ವ್ಯಕ್ತಿಗಳ ಕುಟುಂಬಗಳಿಗೆ ನೆರವಾಗುವಲ್ಲಿ ಪಾಲಿಕೆಯ ವತಿಯಿಂದಲೂ ಅರ್ಥಪೂರ್ಣವಾಗಿ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಆಚರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕೋರುತ್ತಾ, ದಲಿತ ನೇತಾರರಾದ ದಿವಂಗತ ಚೋಳನ್‌ರವರು 3 ಬಾರಿ ಪಾಲಿಕೆಯ ಸದಸ್ಯರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದು, ಪರಿಶಿಷ್ಟ ಜಾತಿಗೆ ಸೇರಿದವರಾದ ಸದರಿಯವರು ಡಾ। ಬಿ.ಆರ್. ಅಂಬೇಡ್ಕರ್ ರವರ ತತ್ವ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡು ದಲಿತರ ಏಳಿಗೆಗಾಗಿ ಪ್ರಾಮಾಣಿಕವಾಗಿ ಮತ್ತು ಅವಿರತವಾಗಿ ಶ್ರಮಿಸಿದ ವ್ಯಕ್ತಿಯಾಗಿದ್ದು, ಪ್ರಸ್ತುತ ರವರ ಕುಟುಂಬಕ್ಕೆ ವಾಸಿಸಲು ಸ್ವಂತ ಮನೆಯಿಲ್ಲದೆ ಕಡುಬಡತನದಿಂದಾಗಿ ತೊಂದರೆ ಅನುಭವಿಸುತ್ತಿರುವ ಕಾರಣ ದಿವಂಗತ ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರಿಗೆ

ಮೇಲ್ಕಂಡ ಪಾಲಿಕೆಯ ಸ್ವತ್ತನ್ನು ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸುವಂತೆ ಹಾಗೂ ಡಾ। ಬಿ.ಆರ್. ಅಂಬೇಡ್ಕರ್ ರವರ 125 ಜನ್ಮ ದಿನಾಚರಣೆಯ ಅಂಗವಾಗಿ ಈ ಒಂದು ಪ್ರಸ್ತಾವನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪಾಲಿಕೆಯ ಸಭೆಯ ಮುಂದೆ ಪ್ರಸ್ತಾವನೆಯನ್ನು ಮರು ಮಂಡಿಸಬೇಕೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸಮಿತಿಯು ಕೆಳಕಂಡಂತೆ ತನ್ನ ಸಮಜಾಯಿಷಿಯನ್ನು ನೀಡಲು ಸರ್ವಾನುಮತದಿಂದ ತೀರ್ಮಾನಿಸಿತು.

**"ದಿವಂಗತ ಚೋಳನ್ ರವರು ಪರಿಶಿಷ್ಟ ಜಾತಿಯವರಾಗಿದ್ದು, ಪಾಲಿಕೆಯ ಮಾಜಿ ಸದಸ್ಯರಾಗಿ ದಲಿತರ ಏಳಿಗೆಗಾಗಿ ಅವಿರತ ಶ್ರಮಿಸಿದವರಾಗಿರುವುದರಿಂದ ಹಾಗೂ ತತ್ಸಂಬಂಧ ಶ್ರೀ. ಸಂಪತ್‌ರಾಜು, ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ-47 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸದಸ್ಯರು ರವರು ದಿನಾಂಕ:25-02-2016ರಂದು ಸಮಿತಿಗೆ ನೀಡಿರುವ ಪತ್ರವನ್ನು ಆಧರಿಸಿ, ಈಗಾಗಲೆ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಮತ್ತು ಸಂಬಂಧಪಟ್ಟ ಸ್ಥಾಯಿ ಸಮಿತಿಗಳು ಪಾಲಿಕೆ ಸ್ವತ್ತನ್ನು ಕ್ರಯಕ್ಕೆ ನೀಡುವ ಕುರಿತಂತೆ ತೀರ್ಮಾನಿಸಿರುವುದರಿಂದ ಸದರಿ ತೀರ್ಮಾನವು ಸಮಂಜಸವಾಗಿರುತ್ತದೆಂದು ಸಮಿತಿಯು ಅಭಿಪ್ರಾಯಿಸುತ್ತಾ, ಡಾ॥ ಬಿ.ಆರ್. ಅಂಬೇಡ್ಕರ್ ರವರ 125ನೇ ಜನ್ಮ ದಿನಾಚರಣೆಯ ಅಂಗವಾಗಿ ಸದರಿ ದಲಿತ ನಾಯಕನ ಕುಟುಂಬಕ್ಕೆ ನೆರವಾಗುವ ನಿಟ್ಟಿನಲ್ಲಿ ಮಾನವೀಯತೆ ದೃಷ್ಟಿಯಿಂದ ಈ ಒಂದು ಪ್ರಸ್ತಾವನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ದಿವಂಗತ ಚೋಳನ್ ರವರ ಪತ್ನಿಯಾದ ಶ್ರೀಮತಿ. ರುಕ್ಮಿಣಿ ರವರಿಗೆ ಪಾಲಿಕೆಯ ಸದರಿ ಸ್ವತ್ತನ್ನು ಕ್ರಯಕ್ಕೆ ನೀಡಲು ತೀರ್ಮಾನಿಸಿ, ಘನ ಸರ್ಕಾರಕ್ಕೆ ಪ್ರಸ್ತಾವನೆಯನ್ನು ರದ್ದು ಪಡಿಸಬಾರದೆಂದು ಕೋರಲು ಆಯುಕ್ತರು ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01.03.2016ರ ಸಭೆಯ ನಿರ್ಣಯ.'**

**-ಮುಂದೂಡಿದೆ-**

***19]. ವಿಷಯದ ಸಂಖ್ಯೆ: ತೆಆಸ್ಥಾಸ/80/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಮೆ॥ ಟೆರ್ರಾಫಾರ್ಮ ಮತ್ತು ಎಂ.ಎಸ್. ಜಿ.ಪಿ ತ್ಯಾಜ್ಯ ಸಂಸ್ಕರಣಾ ಘಟಕದ ಘನತ್ಯಾಜ್ಯ ವಸ್ತುಗಳಿಂದ ಪರಿಸರ ಮಾಲಿನ್ಯ, ಸೊಳ್ಳೆ ಹಾವಳಿ, ಕೊಳವೆ ಬಾವಿಗಳ ನೀರು ಕಲುಷಿತಗೊಂಡಿದ್ದು, ಈ ಪ್ರದೇಶ ಸುತ್ತಮುತ್ತಲಿನ ಸಕ್ಕರೆಗೊಲ್ಲಹಳ್ಳಿ, ಭಕ್ತರಹಳ್ಳಿ, ಹುಲಿಕುಂಟೆ, ದೊಡ್ಡ ಬೆಲವಂಗಳ, ಸಾಸಲು, ಹೊಸಳ್ಳಿ, ಆರೂಡಿ ಮತ್ತು ಹುಲಿಕುಂಟೆ ಗ್ರಾಮ ಪಂಚಾಯತಿಗಳಲ್ಲಿ Over Head Tank ನಿರ್ಮಾಣ ಮಾಡುವ 28 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ. 814.95 ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾನ್ಯ ಶಾಸಕರು, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ ರವರು ದಿನಾಂಕ 28-12-2015 ರ ತಮ್ಮ ಪತ್ರದಲ್ಲಿ ಕೋರಿರುತ್ತಾರೆ. ಸದರಿ ಪ್ರಸ್ಥಾವನೆಯ ಕಾಮಗಾರಿಗಳನ್ನು 2015-16ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-2200 14ನೇ ಹಣಕಾಸು ಆಯೋಗದ ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳು ಅಡಿ ಜಾಬ್‌ಸಂಖ್ಯೆ ನೀಡಲು ಕೋರಲಾಗಿದೆ. ಲೆಕ್ಕಶೀರ್ಷಿಕೆ ಪಿ-2200 ರಡಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು ಪಿ-2200 ಅಡಿ ರೂ. 8403.02 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಒಟ್ಟು **ರೂ.9403.02 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.**

ಸರ್ಕಾರದ ಆಯವ್ಯಯದಲ್ಲಿ ರೂ. 217.74 ಕೋಟಿಗಳ ಎಸ್.ಎಫ್.ಸಿ. ಮುಕ್ತ ನಿಧಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿದ್ದು. 2015-16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಮುಕ್ತ ನಿಧಿಯ ಅನುದಾನದಲ್ಲಿ ವೆಚ್ಚಗಳನ್ನು ಭರಿಸಲು ಆಯವ್ಯಯದಲ್ಲಿ ವೆಚ್ಚದ ಭಾಗದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ ಲೆಕ್ಕಶೀರ್ಷಿಕೆ ಪಿ.-2200 ನ್ನು ಈಗಾಗಲೇ ಘನತ್ಯಾಜ್ಯ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕಾಮಗಾರಿಗಳಿಗೆ ಬಳಸಲಾಗುತ್ತಿರುವುದರಿಂದ ರೂ. 9403.02 ಲಕ್ಷಗಳ ಕಾಮಗಾರಿಗೆ ಎಸ್.ಎಫ್.ಸಿ. ಮುಕ್ತ ನಿಧಿಯ ಅಡಿ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ.

ಎಸ್.ಎಫ್.ಸಿ. ಮುಕ್ತ ನಿಧಿಯ ಅನುದಾನದ ಕಾಮಗಾರಿಗಳನ್ನು ಪ್ರತ್ಯೇಕ ಲೆಕ್ಕಶೀರ್ಷಿಕೆ ಅಡಿ ನಿರ್ವಹಿಸುದು ಸೂಕ್ತವಾಗಿರುದರಿಂದ, 2015-16ರ ಆಯವ್ಯಯದಲ್ಲಿ "ಎಸ್.ಎಫ್.ಸಿ. ಮುಕ್ತ ನಿಧಿಯ ಅನುದಾನದ ಕಾಮಗಾರಿಗಳು ಪಿ-3111" ಎಂಬ ಹೊಸ ಲೆಕ್ಕಶೀರ್ಷಿಕೆ ಸೃಜಿಸಲಾಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ಸದರಿ ರೂ. 814.95 ಲಕ್ಷಗಳ ಕಾಮಗಾರಿಗಳನ್ನು ಪಿ-3111 ಅಡಿ ಪರಿಗಣಿಸಬಹುದಾಗಿದೆ. ಹಾಗೂ ಸದರಿ ಮೊತ್ತವನ್ನು 2015-16 ರ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಿದೆ. ಸದರಿ ಕಾಮಗಾರಿಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಿದೆ.

2015–16ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3111 ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ರೂ. 814.95 ಲಕ್ಷಗಳ ಅನುದಾನ ಅಳವಡಿಸಿಕೊಂಡು, ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***20]. ವಿಷಯದ ಸಂಖ್ಯೆ: ತೆಆಸ್ಥಾಸ/81/2015–16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಮೆ॥ ಟೆರ್ರಾಫಾರ್ಮ ಮತ್ತು ಎಂ.ಎಸ್. ಜಿ.ಪಿ ತ್ಯಾಜ್ಯ ಸಂಸ್ಕರಣಾ ಘಟಕದ ಸುತ್ತಮುತ್ತಲಿನ ಸಕ್ಕರೆಗೊಲ್ಲಹಳ್ಳಿ ಮತ್ತು ಭಕ್ತರಹಳ್ಳಿ ಗ್ರಾಮ ಪಂಚಾಯತಿಯ ಕೆಲವೊಂದು ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ Additional work for internal roads and RCC drain at Chikkamankanala in Sakkare Golhalli grama Panchayath in Doddaballapura taluk ಕಾಮಗಾರಿಯ ಅಂದಾಜು ಮೊತ್ತ ರೂ. 96.40 ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾನ್ಯ ಶಾಸಕರು, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ ರವರು ದಿನಾಂಕ 6–11–2015 ರ ತಮ್ಮ ಪತ್ರದಲ್ಲಿ ಕೋರಿರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸದರಿ ಕಾಮಗಾರಿಗಳನ್ನು ಕೂಡಲೇ ತೆಗೆದುಕೊಳ್ಳುವುದು ಎಂದು ಸೂಚಿಸಿರುತ್ತಾರೆ. ಸದರಿ ಪ್ರಸ್ಥಾವನೆಯ ಕಾಮಗಾರಿಗಳನ್ನು 2015–16ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–2200 14ನೇ ಹಣಕಾಸು ಆಯೋಗದ ಘನತ್ಯಾಜ್ಯ ನಿರ್ವಹಣೆ ಕಾಮಗಾರಿಗಳು ಅಡಿ ಜಾಬ್‌ಸಂಖ್ಯೆ ನೀಡಲು ಕೋರಲಾಗಿದೆ. ಲೆಕ್ಕಶೀರ್ಷಿಕೆ ಪಿ–2200 ರಡಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದ್ದು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ಪಡೆದು ಪಿ–2200 ಅಡಿ ರೂ. 8403.02 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಒಟ್ಟು ರೂ.9403.02 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ.

ಸರ್ಕಾರದ ಆಯವ್ಯಯದಲ್ಲಿ ರೂ. 217.74 ಕೋಟಿಗಳ ಎಸ್.ಎಫ್.ಸಿ. ಮುಕ್ತ ನಿಧಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒದಗಿಸಿದ್ದು. 2015–16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಮುಕ್ತ ನಿಧಿಯ ಅನುದಾನದಲ್ಲಿ ವೆಚ್ಚಗಳನ್ನು ಭರಿಸಲು ಆಯವ್ಯಯದಲ್ಲಿ ವೆಚ್ಚದ ಭಾಗದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ ಲೆಕ್ಕಶೀರ್ಷಿಕೆ ಪಿ.–2200 ನ್ನು ಈಗಾಗಲೇ ಘನತ್ಯಾಜ್ಯ ನಿರ್ವಹಣೆ ಮತ್ತು ಅಭಿವೃದ್ಧಿಗೆ ಕಾಮಗಾರಿಗಳಿಗೆ ಬಳಸಲಾಗುತ್ತಿರುವುದರಿಂದ ರೂ. 9403.02 ಲಕ್ಷಗಳ ಕಾಮಗಾರಿಗೆ ಎಸ್.ಎಫ್.ಸಿ. ಮುಕ್ತ ನಿಧಿಯ ಅಡಿ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ.

ಎಸ್.ಎಫ್.ಸಿ. ಮುಕ್ತ ನಿಧಿಯ ಅನುದಾನದ ಕಾಮಗಾರಿಗಳನ್ನು ಪ್ರತ್ಯೇಕ ಲೆಕ್ಕಶೀರ್ಷಿಕೆ ಅಡಿ ನಿರ್ವಹಿಸುದು ಸೂಕ್ತವಾಗಿರುದರಿಂದ, 2015–16ರ ಆಯವ್ಯಯದಲ್ಲಿ "ಎಸ್.ಎಫ್.ಸಿ. ಮುಕ್ತ ನಿಧಿಯ ಅನುದಾನದ ಕಾಮಗಾರಿಗಳು ಪಿ–3111" ಎಂಬ ಹೊಸ ಲೆಕ್ಕಶೀರ್ಷಿಕೆ ಸೃಜಿಸಲಾಗಿದ್ದು, ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದರಿಂದ ಸದರಿ ರೂ. 95.60 ಲಕ್ಷಗಳ ಕಾಮಗಾರಿಯನ್ನು ಪಿ–3111 ಅಡಿ ಪರಿಗಣಿಸಬಹುದಾಗಿದೆ. ಹಾಗೂ ಸದರಿ ಮೊತ್ತವನ್ನು 2015–16
ರ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಿದೆ. ಕಾಮಗಾರಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಿದೆ. 2015–16ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ–3111 ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ರೂ. 95.60 ಲಕ್ಷಗಳ ಅನುದಾನ ಅಳವಡಿಸಿಕೊಂಡು, ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *21]. ವಿಷಯದ ಸಂಖ್ಯೆ: ತೆಆಸ್ಥಾಸ/82/2015–16*

ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 17.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕಾ.ಪಾ.ಅ.–4 ಕೆ.ಆರ್.ಐ.ಡಿ.ಎಲ್. ಬಿಬಿಎಂಪಿರವರು ದೊಡ್ಡಬಳ್ಳಾಪುರ ತಾಲ್ಲೂಕಿನ ಮೆ॥ ಟೆರ್ರಾಫಾರ್ಮ್ & ಎಂ.ಎಸ್.ಜಿ.ಪಿ. ತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತ–ಮುತ್ತಲಿನ ಭಕ್ತರಹಳ್ಳಿ ಹಾಗೂ ಸಕ್ಕರೆಗೊಲ್ಲಹಳ್ಳಿ ಗ್ರಾಮ ಪಂಚಾಯಿತಿಯ ಕೆಲವೊಂದು ಗ್ರಾಮಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಸಲುವಾಗಿ ಮೇಲ್ಕಂಡ ಕಾಮಗಾರಿಯನ್ನು ನಿರ್ವಹಿಸಲು ಶ್ರೀ.ವೆಂಕಟರಮಣಯ್ಯ ಮಾನ್ಯ ಶಾಸಕರು ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರರವರು ಸೂಚಿಸಿರುತ್ತಾರೆ. ಸದರಿ ಪತ್ರದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ಸರ್ಕಾರ ರವರು ಆಯುಕ್ತರು ಬಿಬಿಎಂಪಿರವರು ಕೂಡಲೇ ಮೇಲಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಆದೇಶಿಸಿರುತ್ತಾರೆ.

ಆದ್ದರಿಂದ ಮೆ॥ ಟೆರ್ರಾಫಾರ್ಮ್ & ಎಂ.ಎಸ್.ಜಿ.ಪಿ ಸಂಸ್ಕರಣಾ ಘಟಕದ ಸುತ್ತ–ಮುತ್ತಲಿನ ಭಕ್ತರಹಳ್ಳಿ ಗ್ರಾಮಪಂಚಾಯಿತಿಯ ಶಿರಗೊಂಡನಹಳ್ಳಿ ಗ್ರಾಮದಲ್ಲಿ ಬಾಕ್ಸ್‌ಕಲ್‌ವರ್ಟ್ ನಿರ್ಮಿಸುವ ಕಾಮಗಾರಿಗಾಗಿ 2015–16ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಕಾರ್ಯಪಾಲಕ ಅಭಿಯಂತರರು (ಯೋಜನೆ–ಪಶ್ಚಿಮ)ರವರು ರೂ.39=65 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಜಾಬ್ ಕೋಡ್ ನೀಡಲು ಕೋರಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ಬೃ.ಬೆಂ.ಮ.ಪಾ.ರವರು ಕಡತದಲ್ಲಿ ಸಲ್ಲಿಸಿರುವ ವರದಿಯಂತೆ, 2015–16ನೇ ಸಾಲಿನ ಆಯವ್ಯಯ 14ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆ ಪಿ–2200ಅನ್ನು ಘನತ್ಯಾಜ್ಯ ನಿರ್ವಹಣೆ & ಅಭಿವೃದ್ಧಿ ಕಾಮಗಾರಿಗಾಗಿ ಬಳಸಲಾಗುತ್ತಿರುವುದರಿಂದ, ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಎಸ್.ಎಫ್.ಸಿ.ಮುಕ್ತ ನಿಧಿಯ ಕಾಮಗಾರಿಗಳಿಗೆ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದ್ದು, ಪ್ರಸ್ತುತ ಪಿ–2200 ಅಡಿ ರೂ.9403.02 ಲಕ್ಷಗಳಿಗೆ ಜಾಬ್ ಕೋಡ್ ನೀಡಲಾಗಿದ್ದು, ರೂ.9403.92 ಲಕ್ಷಗಳ ಕಾಮಗಾರಿಗಳನ್ನು ಸೇರ್ಪಡಿಸಿಕೊಂಡು ಎಸ್.ಎಫ್.ಸಿ ಮುಕ್ತ ನಿಧಿ ಅಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತಕ್ಕೆ ಪ್ರಸ್ತಾವನೆಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು, ಸದರಿ ಕಾಮಗಾರಿಗೆ 2015–16ರ ಪಿ–2200 ಅಡಿ ಆಯವ್ಯಯದ ಅನುದಾನದ ಕೊರತೆ ಇರುವುದರಿಂದ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್ ಕೋಡ್ ಸಂಖ್ಯೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

| SL.No. | Name of Work | Estimate Cost (in Lakhs) |
|---|---|---|
| 01 | Construction of Box Culvert at Shiragondanahalli of Bhaktharahalli Grama Panchayath in Doddaballapura Taluk | 39=65 Lakhs |

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *22]. ವಿಷಯದ ಸಂಖ್ಯೆ: ತೆಆಸ್ಥಾಸ/83/2015–16*

ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 17.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಕೆ.ಜೆ.ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮಾನ್ಯ ಆಯುಕ್ತರು ಬಿಬಿಎಂಪಿ ರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ, ಶ್ರೀ.ವೆಂಕಟರಮಣಯ್ಯ, ಶಾಸಕರು ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರ ಬೆಂಗಳೂರು (ಗ್ರಾ) ಜಿಲ್ಲೆರವರ ಪತ್ರಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಸ ವಿಲೇವಾರಿಗೆ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕ್ರಮ ಕೈಗೊಳ್ಳಲಾಗಿದ್ದು, ಮೆ॥ ಟೆರ್ರಾಫಾರ್ಮ್ & ಎಂ.ಎಸ್.ಜಿ.ಪಿ. ಘಟಕಗಳ ವ್ಯಾಪ್ತಿಯಲ್ಲಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮೆ॥ ಟೆರ್ರಾಫಾರ್ಮ್ & ಎಂ.ಎಸ್.ಜಿ.ಪಿ.ಘಟಕಗಳ ವ್ಯಾಪ್ತಿಯಲ್ಲಿನ ಗ್ರಾಮೀಣ ರಸ್ತೆಗಳ ಅಭಿವೃದ್ಧಿಪಡಿಸಲಾಗುವುದೆಂದು ಆಶ್ವಾಸನೆ ನೀಡಿದ್ದು, ಅದರಂತೆ

ಬೃ.ಬೆಂ.ಮ.ಪಾ.ವತಿಯಿಂದ ಅಗತ್ಯವಿರುವ ಅನುದಾನವನ್ನು ಬಿಡುಗಡೆ ಮಾಡಿ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಕ್ರಮವಹಿಸುವಂತೆ ಸೂಚಿಸಿರುತ್ತಾರೆ.

ಶ್ರೀ.ವೆಂಕಟರಮಣಯ್ಯ, ಶಾಸಕರು ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರ ಬೆಂಗಳೂರು (ಗ್ರಾ)ಜಿಲ್ಲೆರವರು ಶ್ರೀ.ಕೆ.ಜೆ.ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ದೊಡ್ಡಬೆಳವಂಗಲ ಹೋಬಳಿ ಸಕ್ಕರೆಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮೆ॥ ಟೆರ್ರಾಫಾರ್ಮ್ & ಎಂ.ಎಸ್.ಜಿ.ಪಿ. ತ್ಯಾಜ್ಯವನ್ನು ಸಂಸ್ಕರಿಸುವ ಘಟಕಗಳಾಗಿ ಕಾರ್ಯನಿರ್ವಹಿಸುತ್ತಿದ್ದು ಈ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಸಂಪರ್ಕ ರಸ್ತೆಗಳು ಬಳಕೆಗೆ ತೀರಾ ಹದಗೆಟ್ಟಿದ್ದು ಈ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕವಾಗಿದ್ದು, ಸದರಿ ರಸ್ತೆ ಕಾಮಗಾರಿಗಳ ಅಂದಾಜು ಪಟ್ಟಿಗೆ ಅವಶ್ಯಕ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡಂತೆ ವಿವರಿಸಿರುವ ಕಾರಣಗಳಿಂದಾಗಿ, ಮೆ॥ ಟೆರ್ರಾಫಾರ್ಮ್ & ಎಂ.ಎಸ್.ಜಿ.ಪಿ ಸಂಸ್ಕರಣಾ ಘಟಕಗಳ ವ್ಯಾಪ್ತಿಯಲ್ಲಿನ ಈ ಕೆಳಕಂಡ ಗ್ರಾಮಗಳಲ್ಲಿನ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಗಳನ್ನು ನಿರ್ವಹಿಸಲು ಕಾರ್ಯಪಾಲಕ ಅಭಿಯಂತರರು (ಯೋಜನೆ–ಪಶ್ಚಿಮ) ವಿಭಾಗದಿಂದ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಜಾಬ್ ಕೋಡ್‌ಗಳನ್ನು ನೀಡಲು ಕೋರಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ಬೃ.ಬೆಂ.ಮ.ಪಾ.ರವರು ಕಡತದಲ್ಲಿ ಸಲ್ಲಿಸಿರುವ ವರದಿಯಂತೆ, 2015–16ನೇ ಸಾಲಿನ ಆಯವ್ಯಯ 14ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆ ಪಿ–2200ಅನ್ನು ಘನತ್ಯಾಜ್ಯ ನಿರ್ವಹಣೆ & ಅಭಿವೃದ್ಧಿ ಕಾಮಗಾರಿಗಾಗಿ ಬಳಸಲಾಗುತ್ತಿರುವುದರಿಂದ, ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಎಸ್.ಎಫ್.ಸಿ.ಮುಕ್ತ ನಿಧಿಯ ಕಾಮಗಾರಿಗಳಿಗೆ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದ್ದು, ಪ್ರಸ್ತುತ ಪಿ–2200 ಅಡಿ ರೂ.9403.02 ಲಕ್ಷಗಳಿಗೆ ಜಾಬ್ ಕೋಡ್ ನೀಡಲಾಗಿದ್ದು, ರೂ.9403.92 ಲಕ್ಷಗಳ ಕಾಮಗಾರಿಗಳನ್ನು ಸೇರ್ಪಡಿಸಿಕೊಂಡು ಎಸ್.ಎಫ್.ಸಿ ಮುಕ್ತ ನಿಧಿ ಅಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತಕ್ಕೆ ಪ್ರಸ್ತಾವನೆಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು, ಸದರಿ ಕಾಮಗಾರಿಗೆ 2015–16ರ ಪಿ–2200 ಅಡಿ ಆಯವ್ಯಯದ ಅನುದಾನದ ಕೊರತೆ ಇರುವುದರಿಂದ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಈ ಕೆಳಕಂಡ 27 ಕಾಮಗಾರಿಗಳಿಗೆ ಜಾಬ್ ಕೋಡ್ ಸಂಖ್ಯೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

| SL.No. | Name of Work | Estimate Cost (in Lakhs) |
|---|---|---|
| 1 | Asphalting to roads from NH 207 to Ambalagere Marikatte (Via Anjaneyaswamy Temple, Pate Basavanna Temple) of Hulikunte Grama Panchayath in Doddaballapura Taluk. | 98.15 |
| 2 | Asphalting to roads from NH 207 to Toobukunte Village of Hulikunte Grama Panchayath in Doddaballapura Taluk. | 41.50 |
| SL.No. | Name of Work | Estimate Cost (in Lakhs) |
| 3 | Asphalting to roads from Venkataswamy Estate of Hulikunte Village to Doddamankanala (Via Hunasepalya, Mariheggayyanapalya, Tubukunte, Bhovi palya) of Hulikunte Grama Panchayath in Doddaballapura Taluk. | 111.25 |
| 4 | Asphalting to roads from Channaveeranahalli to Hulikudi Betta Via Halekote and Tambenahalli Cross of Sasalu Grama Panchayath in Doddaballapura Taluk. | 50.60 |
| 5 | Asphalting to roads from Kaada alappana halli to Halekote village (Via Nagalapura) of Sasalu Grama Panchayath in Doddaballapura Taluk. | 37.00 |
| 6 | Asphalting to roads from Lakkenahalli to Machenahalli Village Via Garudagallu of Sasalu Grama Panchayath in Doddaballapura Taluk. | 57.10 |
| 7 | Asphalting to roads from Kanakenahalli-Garudagallu Road to Sriramanahalli Colony of Sasalu Grama Panchayath in Doddaballapura Taluk. | 24.65 |
| 8 | Asphalting to roads from Garudagallu Village to Kanakenahalli Village Via Singenahalli of Sasalu Grama Panchayath in Doddaballapura Taluk. | 49.85 |
| 9 | Asphalting to roads from Lakkenahalli Village to Dasarapalya Village Via Singenahalli Cross of Sasalu Grama Panchayath in Doddaballapura Taluk. | 30.62 |

| | | |
|---|---|---|
| 10 | Asphalting to roads from Machenahalli Village to Dasarapalya Village of Sasalu Grama Panchayath in Doddaballapura Taluk. | 17.85 |
| 11 | Providing Asphalting to roads from Lingapura Village to Hulikudi Betta of Sakkaregollahalli Grama Panchayath in Doddaballapura Taluk. | 69.75 |
| 12 | Asphalting to roads from Konenahalli Village to Halekoti Hulikudi Betta (Via Sankarasanahalli, Tumbenahalli, Boochanahalli) of Sakkaregollahalli Grama Panchayath in Doddaballapura Taluk. | 93.10 |
| 13 | Asphalting to roads from Sakkaregollahalli Village to Akkathammanahalli Kamana Agrahara Link Road of Sakkaregollahalli Grama Panchayath in Doddaballapura Taluk. | 30.85 |
| 14 | Asphalting to roads from Akkathammanahalli Lingapura Main Road to Chikkakalenahalli Link Road (Via Bheemaravuthanahalli) of Sakkaregollahalli Grama Panchayath in Doddaballapura Taluk. | 56.40 |
| 15 | Asphalting to roads from Alappanahalli to Lakkenahalli Village (Via Chowdayyanapalya, Benachchihatti) of Bhaktharahalli Grama Panchayath in Doddaballapura Taluk. | 35.35 |
| 16 | Asphalting to road from Alappanahalli - Sasalu Road to Hanumanthayyanapalya Village of Bhaktharahalli Grama Panchayath in Doddaballapura Taluk. | 17.85 |
| 17 | Asphalting to roads from Adakavala-Kanakenahalli to Mallegowdanahalli Village of Bhaktharahalli Grama Panchayath in Doddaballapura Taluk. | 20.00 |
| 18 | Asphalting to roads from Bhaktharahalli Village to Alappanahalli - Shiragondanahalli Road Link Road of Bhaktharahalli Grama Panchayath in Doddaballapura Taluk. | 17.85 |
| 19 | Asphalting to roads from Alappanahalli - Doddamankanala Main Road to Bommanahalli Village of Bhaktharahalli Grama Panchayath in Doddaballapura Taluk. | 17.85 |
| 20 | Asphalting to roads from Kalipalya Cross - Alappanahalli Road to Shiragondanahalli Village of Bhaktharahalli Grama Panchayath in Doddaballapura Taluk. | 24.50 |
| 21 | Asphalting to roads from Kalipalya Cross to Alappanahalli Village of Bhaktharahalli Grama Panchayath in Doddaballapura Taluk. | 24.50 |
| SL.No. | Name of Work | Estimate Cost (in Lakhs) |
| 22 | Providing drains and Asphalting to roads from Gundlahalli Village to Appegowdanahalli Village of Bhaktharahalli Grama Panchayath in Doddaballapura Taluk. | 35.60 |
| 23 | Asphalting to roads from Rampura - Bhaktharahalli Main Road to Lingapura Village (Via Mallanayakanahalli) of Doddabelavangala Grama Panchayath in Doddaballapura Taluk. | 30.45 |
| 24 | Asphalting to Roads from Rampura - Bhaktharahalli Main Road to Chikkanahalli Main Road (Via Jodikarepura) of Doddabelavangala Grama Panchayath in Doddaballapura Taluk. | 42.65 |
| 25 | Asphalting to Roads from Chikkahejjaji KereKodi (Tankbund) to Ayyanahalli Village of Doddabelavangala Grama Panchayath in Doddaballapura Taluk. | 99.85 |
| 26 | Asphalting to roads from NH 207 to Moogenahalli Village of Doddabelavangala Grama Panchayath in Doddaballapura Taluk. | 27.30 |
| 27 | Asphalting to Doddabelavangala Village to Holerahalli Village of Doddabelavangala Grama Panchayath in Doddaballapura Taluk. | 62.91 |
| | **TOTAL AMOUNT** | **1225.33** |

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***23]. ವಿಷಯದ ಸಂಖ್ಯೆ: ತೆಆಸ್ಥಾಸ/84/2015-16***

ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 17.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮೆ॥ ಟೆರ್ರಾಫಾರ್ಮ್ & ಎಂಎಸ್‌ಜಿಪಿ ಸಂಸ್ಕರಣಾ ಘಟಕದ ರಸ್ತೆಯಲ್ಲಿ ಬರುವ ಸದರಿ ರಸ್ತೆಯನ್ನು ಪ್ರತಿ ನಿತ್ಯ 100 (ಅಂದಾಜು) BBMP Garbage Vechiles & Tippers ಗಳು ಉಪಯೋಗಿಸುತ್ತಿರುವುದರಿಂದ ಸದರಿ ರಸ್ತೆಯಲ್ಲಿ ಅನೇಕ ಕಡೆಗಳಲ್ಲಿ ಗುಂಡಿಗಳು ಬಿದ್ದಿರುತ್ತವೆ. ಇದರಿಂದ ಸದರಿ ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ & ಸಾರ್ವಜನಿಕರಿಗೆ ಅಪಘಾತವನ್ನು ತಡೆಯಲು ರಸ್ತೆ ಪಾಟ್ ಹೋಲ್ ಫಿಲ್ಲಿಂಗ್ ಕೆಲಸವು ಅತ್ಯಾವಶ್ಯಕವಾಗಿರುತ್ತದೆ.

ಸದರಿ ರಸ್ತೆಯ ಡಾಂಬರೀಕರಣ ಕಾಮಗಾರಿಯ Maintanance period ಮುಕ್ತಾಯವಾಗಿರುವುದರಿಂದ, ದೊಡ್ಡ ಬಳ್ಳಾಪುರದ ಎನ್.ಹೆಚ್.ರಸ್ತೆಯಾದ ದೊಡ್ಡ ಮಂಕನಾಳ ಮುಖ್ಯ ರಸ್ತೆಯಿಂದ ಮೆ॥ ಟೆರ್ರಾಫಾರ್ಮ್ & ಎಂಎಸ್‌ಜಿಪಿ ಸಂಸ್ಕರಣಾ ಘಟಕದ ರಸ್ತೆಯಲ್ಲಿ ಬರುವ ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ ಪಾಟ್ ಹೋಲ್ ಫಿಲ್ಲಿಂಗ್ ಕಾಮಗಾರಿಯು ಅತೀ ಅವಶ್ಯಕವಾಗಿರುತ್ತದೆ.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಸವಿಲೇವಾರಿಯನ್ನು ಮಾಡುತ್ತಿರುವ ಮೆ॥ ಟೆರ್ರಾಫಾರ್ಮ & ಎಂ.ಎಸ್.ಜಿ.ಪಿ. ಸಂಸ್ಕರಣಾ ಘಟಕದ ರಸ್ತೆಯಿಂದ ದೊಡ್ಡ ಬಳ್ಳಾಪುರದ ಎನ್.ಹೆಚ್.ರಸ್ತೆಯಲ್ಲಿನ ಪಾಟ್ ಹೋಲ್ ಫಿಲ್ಲಿಂಗ್‌ಗಾಗಿ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ) ವಿಭಾಗದಿಂದ ರೂ.46=20 ಲಕ್ಷಗಳಿಗಾಗಿ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಜಾಬ್ ಕೋಡ್ ನೀಡಲು ಕೋರಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ಬೃ.ಬೆಂ.ಮ.ಪಾ.ರವರು ಕಡತದಲ್ಲಿ ಸಲ್ಲಿಸಿರುವ ವರದಿಯಂತೆ, 2015-16ನೇ ಸಾಲಿನ ಆಯವ್ಯಯ 14ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆ ಪಿ-2200ಅನ್ನು ಘನತ್ಯಾಜ್ಯ ನಿರ್ವಹಣೆ & ಅಭಿವೃದ್ಧಿ ಕಾಮಗಾರಿಗಾಗಿ ಬಳಸಲಾಗುತ್ತಿರುವುದರಿಂದ, ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಎಸ್.ಎಫ್.ಸಿ.ಮುಕ್ತ ನಿಧಿಯ ಕಾಮಗಾರಿಗಳಿಗೆ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದ್ದು, ಪ್ರಸ್ತುತ ಪಿ-2200 ಅಡಿ ರೂ.9403.02 ಲಕ್ಷಗಳಿಗೆ ಜಾಬ್ ಕೋಡ್ ನೀಡಲಾಗಿದ್ದು, ರೂ.9403.92 ಲಕ್ಷಗಳ ಕಾಮಗಾರಿಗಳನ್ನು ಸೇರ್ಪಡಿಸಿಕೊಂಡು ಎಸ್.ಎಫ್.ಸಿ ಮುಕ್ತ ನಿಧಿ ಅಡಿ ಸರ್ಕಾರದಿಂದ ಬಿಡುಗಡೆಯಾಗಿರುವ ಮೊತ್ತಕ್ಕೆ ಪ್ರಸ್ತಾವನೆಯನ್ನು ಕ್ರಿಯಾ ಯೋಜನೆಯಲ್ಲಿ ಸೇರಿಸಿಕೊಂಡು, ಸದರಿ ಕಾಮಗಾರಿಗೆ 2015-16ರ ಪಿ-2200 ಅಡಿ ಆಯವ್ಯಯದ ಅನುದಾನದ ಕೊರತೆ ಇರುವುದರಿಂದ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್ ಕೋಡ್ ಸಂಖ್ಯೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಕೋರಿದೆ.

| SL.No. | Name of Work | Estimate Cost (in Lakhs) |
|---|---|---|
| 01 | Pothole filling work at Doddaballapura NH Road from Doddamankanala main road to MSGP & Terrafirma in Doddapallapura taluk | 46=20 Lakhs |

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 17.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***ಹೆಚ್ಚುವರಿ ವಿಷಯ:-***

### ***01]. ವಿಷಯದ ಸಂಖ್ಯೆ: ತೆಆಸ್ಥಾಸ/85/2015-16***

ಆಯುಕ್ತರ ದಿನಾಂಕ: 15.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ: ಆಇ 8 ಸೇನಿಸೇ 2015 ಬೆಂಗಳೂರು, ದಿನಾಂಕ: 10/12/2015 ರಲ್ಲಿ, 2016ನೇ ಸಾಲಿನ ಅವಧಿಗೆ ಗರಿಷ್ಟ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗಧೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ದಿನಾಂಕ: 01/01/2016 ರಿಂದ ಜಾರಿಗೊಳಿಸಿ ಈ ಕೆಳಕಂಡಂತೆ ನಿಯತಗೊಳಿಸಲಾಗಿದೆ.

| ಕ್ರಮ ಸಂಖ್ಯೆ | ಅಧಿಕಾರಿ/ನೌಕರರ ಸಮೂಹ | ಮುಂಚಿತವಾಗಿ ಒಂದು ತಿಂಗಳ ನೋಟೀಸ್ ನೀಡಿ 2016 ನೇ ಸಾಲಿನ ಅವಧಿಗೆ ನಗಧೀಕರಣ ಸೌಲಭ್ಯ ಪಡೆಯುವ ಅವಧಿ |
|---|---|---|
| 1. | ಗ್ರೂಪ್'ಡಿ' ಸಮೂಹ | ಅವರ ಇಚ್ಛೆಯಂತೆ 2016ರ ಕ್ಯಾಲೆಂಡರ್ ವರ್ಷದ ಯಾವುದೇ ತಿಂಗಳಿನಲ್ಲಿ |
| 2. | ಉಳಿದ ಸಮೂಹ (ಎ, ಬಿ, ಸಿ) | ಅವರ ಇಚ್ಛೆಯಂತೆ ಏಪ್ರಿಲ್ 2016 ರಿಂದ ಡಿಸೆಂಬರ್ 2016ರ ವರೆಗಿನ ಯಾವುದೇ ತಿಂಗಳಿನಲ್ಲಿ |

1. ಮೇಲೆ ವಿಧಿಸಿದ ನಿಬಂಧನೆಯು ಏನೇ ಇದ್ದಾಗ್ಯೂ ಜನವರಿ 2016 ರಿಂದ ಮಾರ್ಚ್ 2016 ರಲ್ಲಿ ನಿವೃತ್ತಿ ಹೊಂದುವ ಎಲ್ಲಾ ಅರ್ಹ ಅರ್ಹ ನೌಕರರು /ಅಧಿಕಾರಿಗಳು ಅವರು ನಿವೃತ್ತಿ ಹೊಂದುವ ತಿಂಗಳಲ್ಲಿ ನಗದೀಕರಣ ಪ್ರಯೋಜನ ಪಡೆಯಲು ಅರ್ಹರಾಗಿರುತ್ತಾರೆ.
2. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 118 ರಲ್ಲಿ ನಿಯಮಿಸಿರುವಂತಹ ಗಳಿಕೆ ರಜೆ ನಗಧೀಕರಣ ನಿಯಂತ್ರಣಕ್ಕೆ ಸಂಬಂಧಿಸಿದ ಇತರೆ ಷರತ್ತುಗಳು ಅನ್ವಯವಾಗುತ್ತದೆ.
3. ಈ ಆದೇಶವು ಈಗಾಗಲೇ ಈ ಸೌಲಭ್ಯ ವಿಸ್ತರಣೆಯಾಗಿರುವ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಸಂಸ್ಥೆಗಳ ನೌಕರರಿಗೂ ಅನ್ವಯಿಸುತ್ತದೆ.

ಸದರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯ ವರದಿ ಪಡೆಯಲಾಗಿ, ಸರ್ಕಾರದ ಆದೇಶ ಸಂಖ್ಯೆ: ಆಇ 8 ಸೇನಿಸೇ 2015 ಬೆಂಗಳೂರು, ದಿನಾಂಕ: 10/12/2015 ರಂತೆ ದಿನಾಂಕ: 01–01–2016 ರಿಂದ ಜಾರಿಗೆ ಬರುವಂತೆ ಸರ್ಕಾರದ ರಾಜ್ಯ ಸರ್ಕಾರಿ ನೌಕರರಿಗೆ 2016ನೇ ಸಾಲಿನ ಬ್ಲಾಕ್ ಅವಧಿಗೆ ನಗಧೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳ, ನಿಯಮ (118)ರಲ್ಲಿ ನಿಯಮಿಸಿರುವಂತಹ ಗಳಿಕೆ ರಜೆ ನಗಧೀಕರಣ ಸೌಲಭ್ಯವನ್ನು ಪಾಲಿಕೆಯ ಅಧಿಕಾರಿ/ನೌಕರರು ಸಹ ಪಡೆಯಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 8 ಸೇನಿಸೇ 2015 ಬೆಂಗಳೂರು, ದಿನಾಂಕ: 10/12/2015 ರಲ್ಲಿ, 2016ನೇ ಸಾಲಿನ ಅವಧಿಗೆ ಗರಿಷ್ಠ 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅದ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗಧೀಕರಣ ಸೌಲಭ್ಯ ಪಡೆಯುವ ಯೋಜನೆಯನ್ನು ದಿನಾಂಕ: 01/01/2016 ರಿಂದ ಜಾರಿಗೊಳಿಸಿ ಪಾವತಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ: **ಆಯುಕ್ತರ ದಿನಾಂಕ: 15.03.2016ರ ಟಿಪ್ಪಣಿಯನ್ನು ಒಪ್ಪುತ್ತಾ, ಘನ ಸರ್ಕಾರವು ಇನ್ನೂ ಮುಂದೆ ಆಯಾ ಕಾಲಘಟ್ಟಗಳಿಗೆ ತಕ್ಕಂತೆ ನೀಡುವ ಆದೇಶದ ಅನ್ವಯ, ತುಟ್ಟಿಭತ್ಯೆ, ಗಳಿಕೆರಜೆ, ವೇತನ ಆಯೋಗದ ಶಿಫಾರಸ್ಸುಗಳು ಹಾಗೂ ಇನ್ನಿತರೆ ಶಾಸನಬದ್ಧ (Statutory) ಆರ್ಥಿಕ ಸೌಲಭ್ಯಗಳನ್ನು ಸರ್ಕಾರಿ ಆದೇಶದ ರೀತ್ಯ ಜಾರಿಗೊಳಿಸಿ ತದ ನಂತರ ಸ್ಥಿರಿಕರಣಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಸಮಿತಿಯು ತೀರ್ಮಾನಿಸಿತು.**

(ಎಮ್. ಶಿವರಾಜು)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**